# ಅಧ್ಯಾಯ XI

## *ನೂತನ ಸೃಷ್ಟಿಯ ಪಸ್ಕ*

**ಐಗುಪ್ತದ ನೊಗ ಮತ್ತು ಅದರಿಂದ ಬಿಡುಗಡೆ, ಸಂಕೇತ ಮತ್ತು ಪ್ರತಿಸಂಕೇತದಲ್ಲಿ – " ಚೊಚ್ಚಲಿನವರ ಸಭೆ" – " ನಾವು ಅನೇಕರಾಗಿದ್ದಾಗ್ಯೂ ಒಂದೇ ರೊಟ್ಟಿಯಂತಿದ್ದೇವೆ – ಸ್ಮರಣಾರ್ಥವು ಇನ್ನೂ ಯುಕ್ತವಾಗಿದೆ – ಯಾರು ಆಚರಿಸಬಹುದು? – ಯಾರು ನೆರವೇರಿಸಬಹುದು? – ಆರಾಧನಾ ಕ್ರಮ – ಪುನರುತ್ಥಾನದ ಪಸ್ಕ – McClintock ಮತ್ತು Strong's Encyclopedia**

**ನಮ್ಮ ಪಸ್ಕವಾದ ಕ್ರಿಸ್ತನು ನಮಗೋಸ್ಕರ ಅರ್ಪಿಸಲ್ಪಟ್ಟಿದ್ದಾನೆ ; ಆದುದರಿಂದ ನಾವು ಈ ಹಬ್ಬವನ್ನು ಹಳೆಯ ಹಿಟ್ಟಿನಿಂದಲ್ಲ, ಹಗೆತನ ಮತ್ತು ದುಷ್ಟತನದಿಂದಲ್ಲ ಆದರೆ ಹಗೆಯಿಲ್ಲದ, ನಿಷ್ಠಾವಂತ ಮತ್ತು ಸತ್ಯದಿಂದೊಡಗೂಡಿದ ರೊಟ್ಟಿಯೊಡನೆ ಆಚರಿಸೋಣ" ಯಾಕೆಂದರೆ " ನೀವು *ಹುಳಿಯಿಲ್ಲದವರೆನಿಸಿಕೊಂಡದ್ದರಿಂದ ಹಳೆ ಹುಳಿಯನ್ನು ತೆಗೆದುಹಾಗಿ ಹೊಸಕಣಿಕದಂತಾಗಿರಿ. ಯಾಕೆಂದರೆ ನಮ್ಮ ಪಸ್ಕದ ಯಜ್ಞ ಕುರಿಯು ಕೊಯ್ದದೆ. ಅದಾವುದೆಂದರೆ ಕ್ರಿಸ್ತನೇ. ಆದುದರಿಂದ ನಾವು ಹಳೆ ಹುಳಿಯನ್ನು ಅಂದರೆ ದುಮಾರ್ಗತನ, ದುಷ್ಟತ್ವ ಎಂಬ ಹುಳಿಯನ್ನು ಇಟ್ಟುಕೊಳ್ಳದೆ ಹಬ್ಬವನ್ನು ಆಚರಿಸೋಣ*" (೧ ಕೊರಿ ೫ : ೦೫–೭,೮).**

ಸಾಂಕೇತಿಕ ಇಸ್ರಾಯೇಲಿನ ಆದರ್ಶ ಭೂತವಾದ ಅನುಭವಗಳಲ್ಲಿ ಪಸ್ಕವು ಪ್ರಖ್ಯಾತವಾದುದು. ಈ ಹಬ್ಬವನ್ನು ಪ್ರತಿವರ್ಷವೂ ಮೊದಲನೆಯ ತಿಂಗಳ ಹದಿನೈದರಿಂದ ಏಳುದಿನಗಳವರೆಗೆ ಆಚರಿಸಲಾಗುತಿತ್ತು. ಇದನ್ನು ಸಾಮಾನ್ಯವಾಗಿ ಐಗುಪ್ತರ ಬಂಧನದಿಂದ ಇಸ್ರಾಯೇಲ್ಯರ ಬಿಡುಗಡೆಯ ಸ್ಮರಣಾರ್ಥ ಆಚರಿಸಲಾಗುತಿತ್ತು – ನಿರ್ಧಿಷ್ಟವಾಗಿ ಪಸ್ಕವು ಅಂದರೆ ದಾಟಿಹೋಗುವುದು (Pass over) , ಆ ದೇಶದ ಮೇಲೆ ಚೊಚ್ಚಲು ಮಕ್ಕಳ ಮರಣವೆಂಬ ಉಪದ್ರವವುಂಟಾದಾಗ ಇಸ್ರಾಯೇಲ್ಯರ ಚೊಚ್ಚಲು ಮಕ್ಕಳನ್ನು ಇದು ತಟ್ಟದೆ ದಾಟಿ ಹೋದದ್ದನ್ನು ನೆನಪುಮಾಡಿಕೊಳ್ಳುವುದು – ಈ ಅಂತಿಮ ಉಪದ್ರವವು ಇಸ್ರಾಯೇಲ್ಯರನ್ನು ಐಗುಪ್ತರ ಶಾಶ್ವತ ಗುಲಾಮಗಿರಿಯಿಂದ ಬಿಡುಗಡೆಗೊಳಿಸಲು ಒತ್ತಾಯ ತಂದಿತು. ಇಸ್ರಾಯೆಲ್ಯ ಮಕ್ಕಳನ್ನು ತಟ್ಟದೇ ಈ ಉಪದ್ರವವು ದಾಟಿಹೋದದ್ದು ಐಗುಪ್ತರ ಬಂಧನದಿಂದ ಇಸ್ರಾಯೇಲ್ಯ ಜನಾಂಗದ ಬಿಡುಗಡೆ ಮತ್ತು ಅವರು ಕೆಂಪು ಸಮುದ್ರವನ್ನು ಸುರಕ್ಷಿತವಾಗಿ ದಾಟಿಹೋಗುವ ಅಗ್ರಗಾಮಿಯಾಯಿತು. ಈ ಅದ್ಭುತವಾದ ಘಟನೆಯನ್ನು ಇಸ್ರಾಯೇಲ್ಯರು ಸಮರ್ಪಕವಾದ ರೀತಿಯನ್ನು ಸ್ಮರಿಸಿಕೊಳ್ಳುವ ಈ ಆಚರಣೆಯು ಅವರ ನೂತನ ದೇಶದ ಉದಯವನ್ನೂ ನಿಕಟವಾಗಿ ಸಮೀಕರಿಸುತ್ತದೆ. ಈ ರೀತಿಯಲ್ಲಿ ಯೆಹೂದ್ಯರು ಈ ದಿನವನ್ನು ಆಚರಿಸುವವರಾಗಿದ್ದಾರೆ. ಐಹಿಕ ರೀತಿಯಲ್ಲಿ ಸಾಂಕೇತಿಕವಾದ ಇಸ್ರಾಯೇಲ್ಯರಿಗೂ ಮತ್ತು ಇಡೀ ಮಾನವಕುಲಕ್ಕೂ ತಮ್ಮ ಪರಲೋಕದ ತಂದೆಯ ಎಲ್ಲಾ ಕಾರ್ಯಗಳಲ್ಲಿ ಮತ್ತು ವ್ಯವಸ್ಥೆಗಳಲ್ಲಿ ತೋರಿಸುವಷ್ಟೇ ಆಸಕ್ತಿಯನ್ನು ನೂತನ ಸೃಷ್ಟಿಯ ಸದಸ್ಯರುಗಳು ಈ ಸಂಗತಿಗಳಲ್ಲಿಯೂ ತೋರಿಸುವವರಾಗಿದ್ದಾರೆ. ಆದರೆ, ಐಗುಪ್ತದಲ್ಲಿ ಸ್ವಾಭಾವಿಕ ಇಸ್ರಾಯೆಲ್ಯರಿಗೆ ನೆರವೇರಿದ ಸಂಗತಿಗಳು ಇನ್ನೂ ಹೆಚ್ಚಾದ ಧಾರ್ಮಿಕ ಸತ್ಯದ ರೀತಿಯಲ್ಲಿ ಸಂಕೇತಿಕವಾದ ಆತ್ಮೀಕ ಇಸ್ರಾಯೇಲ್ಯರಾದ ತಮಗೆ ಭವ್ಯರೀತಿಯಲ್ಲಿ ಉಂಟಾಗುವ ಮುನ್ಸೂಚನೆಯಾಗಿದೆ ಎಂಬುದರಲ್ಲಿ ನೂತನ ಸೃಷ್ಟಿಗಳು ಇನ್ನೂ ಆಗಾಧವಾದ ಕುತೂಹಲ ಉಳ್ಳವರಾಗಿದ್ದಾರೆ.

ಈ ಆತ್ಮೀಕ ಸಂಗತಿಗಳನ್ನು ಸೂಚಿಸುವಂತೆ ಅಪೋಸ್ತಲನು ***"ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ ; ಅವು ಅವರಿಗೆ ಹುಚ್ಚುಮಾತಾಗಿ ತೋರಿಬರುತ್ತವೆ; ಅವು ಆತ್ಮ ವಿಚಾರಗಳಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು"*** ಎಂತಲೂ " ***ನಮಗಾದರೋ (ನೂತನ ಸೃಷ್ಟಿಗೆ) ದೇವರು ತನ್ನ ಆತ್ಮನ ಮೂಲಕ ಅವುಗಳನ್ನು ಪ್ರಕಟಿಸಿದನು*** ( ೧ ಕೊರಿ ೦೨:೧೪,೧೦) ಎಂತಲೂ ಹೇಳಿದ್ದಾನೆ. ದೇವರು ಅಪೋಸ್ತಲರನ್ನು ತನ್ನ ವಕ್ತಾರರನ್ನಾಗಿ ಉಪಯೋಗಿಸಿ ಅವರ ಮೂಲಕವಾಗಿ ತನ್ನಾತ್ಮನ ಮಾರ್ಗದರ್ಶನದಲ್ಲಿ ಕೆಲವೊಂದು ಸುಳಿವುಗಳನ್ನು ನೀಡಿ ಗಹನವಾದ ದೈವಿಕ ಸಂಗತಿಗಳನ್ನು ನಾವು ಅರ್ಥ ಮಾಡಿಕೊಳ್ಳುವಂತೆ ಮಾಡುತ್ತಾನೆ. ಇಂಥಾ ಒಂದು ಸುಳಿವು ಈ ಅಧ್ಯಾಯದ ಆರಂಭದಲ್ಲಿಯೇ ನಮಗೆ ದೊರೆಯುತ್ತದೆ. ಅಪೋಸ್ತಲನ ಈ ಸೂಚನೆಯನ್ನು ಅನುಸರಿಸುತ್ತಾ ಇಸ್ರಾಯೇಲ್ಯರು ದೈಹಿಕವಾಗಿ ಸಮಗ್ರ ದೇವಜನಾಂಗದ ಅಂದರೆ ಸಹಸ್ರಮಾನದ ಅಂತ್ಯದವರೆಗಿನ ದೇವಜನರ ನಮೂನೆಯಾದರು. ಐಗುಪ್ತರು ಈ ದೇವಜನರ ವಿರೋಧಿಗಳಾದರು, ಅವರ ನಾಯಕನಾದ ಫರೋಹನು ಕೆಡಕು ಮತ್ತು ಅಂಧಕಾರನ ರಾಜಕುಮಾರನಾದ ಸೈತಾನನ್ನು ಪ್ರತಿನಿಧಿ ಸುವವನಾದನು. ಫರೋಹನ ಸೇವಕರು ಮತ್ತು ಆತನ ಅಶ್ವಾರೋಹಿಗಳು ದೊಬ್ಬಲ್ಪಟ್ಟ ದೇವದೂತರನ್ನು ಪ್ರತಿನಿಧಿಸುವವರಾದರು. ಈ ಸೈತಾನನೊಡನೆ ಸಹವಾಸ ಹೊಂದಿದ ಜನರೆಲ್ಲರೂ ಕರ್ತನಿಗೆ ಮತ್ತು ಆತನ ಜನರಾದ ನೂತನ ಸೃಷ್ಟಿಯ ಅಂದರೆ ಒಟ್ಟಾರೆ ದೇವರ ಮನೆವಾರ್ತೆಯವರ ವಿರೋಧಿಗಳಾದರು. ದೇವಜನರಾದ ಇಸ್ರಾಯೇಲ್ಯರು ಬಿಡುಗಡೆಗಾಗಿ ಹಂಬಲಿಸುತ್ತಾ ತಮ್ಮನ್ನು ದುಡಿಸಿಕೊಳ್ಳುವವರ ಹಿಡಿತದಲ್ಲಿ ನರಳುತ್ತಿದುದರಿಂದ ಅವರು ಬಹು ಬಲಹೀನರಾಗಿದ್ದು ತಮ್ಮನ್ನು ತಾವೇ ವಿಮೋಚಿಸಿಕೊಳ್ಳದವರಾಗಿದ್ದರು. ದೇವರು ಮಧ್ಯೆ ಪ್ರವೇಶಿಸದೇ ಹೋದಲ್ಲಿ, ಮೋಶೆಯನ್ನು ಅವರ ವಿಮೋಚಕನನ್ನಾಗಿ ನೇಮಿಸದೇ ಇದ್ದಲ್ಲಿ ಅವರು ತಮ್ಮನ್ನು ಎಂದಿಗೂ ಬಿಡುಗಡೆಗೊಳಿಸಿಕೊಳ್ಳಲಾಗುತ್ತಿದ್ದಿಲ್ಲ. ಅದೇ ರೀತಿಯಲ್ಲಿ ಮಾನವ ಲೋಕವು ಇಂದು ಮತ್ತು ಹಿಂದಿನ ಕಾಲವೆಲ್ಲಾ ಅಂಧಕಾರದ ಅಧಿಪತಿಯಾದ ಸೈತಾನನ ಮತ್ತು ಆತನ ಅಚ್ಚುಮೆಚ್ಚಿನವುಗಳಾದ ಪಾಪ ಮತ್ತು ಮರಣದ ಹಿಡಿತದಲ್ಲಿ ನರಳುತ್ತಾ, ಶ್ರಮೆಪಡುತ್ತಾ ಇದೆ. ಈ ಮಿಲಿಯಾಂತರ ಮಾನವರು ತಮ್ಮ ಸ್ವಂತ ಪಾಪಗಳು ಮತ್ತು ಬಲಹೀನತೆಗಳು ಹಾಗೂ ಇದರ ದಂಡನೆಗಳಾದ ನೋವು ಮತ್ತು ಸಾವು ಇವುಗಳಿಂದ ಬಿಡುಗಡೆ ಪಡಕೊಳ್ಳಲು ಹಂಬಲಿಸುತ್ತಾ ಇದ್ದಾರೆ. ಆದರೆ ದೇವರ ಸಹಾಯವಿಲ್ಲದೆ ಮಾನವಕುಲವು ಶಕ್ತಿಹೀನವಾಗಿದೆ. ಕೆಲವರು ಸತ್ವಪೂರ್ಣ ಹೋರಾಟ ನಡೆಸಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗುತ್ತಾರೆ, ಆದರೆ ಯಾರೂ ಸ್ವತಂತ್ರ ರಾಗುವುದಿಲ್ಲ. ಆದಾಮನ ಸಮಗ್ರ ಸಂತತಿಯವರು ಪಾಪ ಮತ್ತು ಮರಣದ ಬಂಧನದಲ್ಲಿದ್ದಾರೆ ಮತ್ತು ಅವರ ಏಕೈಕ ಭರವಸೆಯು ದೇವರಲ್ಲಿ ಮತ್ತು ಮೋಶೆಯ ಪ್ರತಿಸಂಕೇತನಲ್ಲಿ ಅದೆ. ಈತನು ನಿಗಧಿತ ಸಮಯದಲ್ಲಿ ಅವರನ್ನು ಬಿಡುಗಡೆಗೊಳಿಸುತ್ತಾನೆ. ಎರಡನೆಯ ಮರಣವನ್ನು ಪ್ರತಿನಿಧಿಸುವ ಕೆಂಪುಸಮುದ್ರದಿಂದ ಪಾರುಮಾಡುತ್ತಾನೆ. ಸೈತಾನನು ಮತ್ತು ಆತನ ಸಂಗಡಿಗರು ಮತ್ತು ಆತನಲ್ಲಿ ಮತ್ತು ಆತನ ದುಷ್ಟ ಕಾರ್ಯಗಳಲ್ಲಿ ಸಹಾನುಭೂತಿಯುಳ್ಳ ಪರೋಹ ಮತ್ತು ಆತನ ಸಂಗಡಿಗರು ನಿಜವಾದ ಕೆಂಪುಸಮುದ್ರದಲ್ಲಿ ನಾಶವಾದಂತೆ ಇದರ ಪ್ರತಿಸಂಕೇತವಾದ ಎರಡನೆಯ ಮರಣದಲ್ಲಿ ನಾಶಗೊಳ್ಳುತ್ತಾರೆ. ಆದರೆ, ದೇವಜನರಿಗೆ ಈ ಎರಡನೆಯ ಮರಣವು ಎಂದಿಗೂ ತಟ್ಟುವುದಿಲ್ಲ.

ಈ ಮೊದಲಿನದು ಸಾಮಾನ್ಯ ಚಿತ್ರಣ ; ಆದರೆ ಅದರೊಳಗೆ, ಇನ್ನೂ ಅದರ ಭಾಗವಾಗಿ, ಮತ್ತೊಂದು ನಿರ್ಧಿಷ್ಟವಾದ ಚಿತ್ರಣವಿದೆ. ಇದು ಸಾಮಾನ್ಯವಾಗಿ ಮಾನವ ಜಾತಿಗೆ, ಅವರ ಮರಣ

ಮತ್ತು ಪಾಪದ ಬಿಡುಗಡೆಗೆ ಸಂಬಂಧಿಸಿದ್ದಲ್ಲ , ಆದರೆ ಅವರಲ್ಲಿನ ಒಂದು ವಿಶೇಷ ವರ್ಗದವರಿಗೆ, ಚೊಚ್ಚಲು ಮಕ್ಕಳಿಗೆ. ಇವರು ಅವರ ಪ್ರತಿಸಂಕೇತದವರು ಎಂಬುದಕ್ಕೆ ಅನುಗುಣವಾಗಿ ನಾವು ***"ಚೊಚ್ಚಲು ಮಕ್ಕಳ ಸಭೆ, ನೂತನ ಸೃಷ್ಟಿಗಳು – ಇವರ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟಿವೆ"*** ಎಂಬುವ ಸ್ಫೂರ್ತಿದಾಯಕ ಮಾತುಗಳು ನಮ್ಮ ಗಮನಕ್ಕೆ ಬರುತ್ತವೆ. ಈ ನಮೂನೆಯಲ್ಲಿ ಚೊಚ್ಚಲು ಮಕ್ಕಳು ವಿಶೇಷ ಸ್ಥಾನಮಾನವನ್ನು ಅಲಂಕರಿಸುತ್ತಾರೆ. ಅವರುಗಳು ಬಾಧ್ಯಸ್ಥರು ; ಅವರ ಸಹೋದರರುಗಳಿಗಿಂತ ಮುಂಚಿತವಾಗಿ ವಿಶೇಷ ಪರೀಕ್ಷೆಗೆ ಒಳಗಾಗುವ ವಿಶೇಷ ಸ್ಥಾನಮಾನ ಅವರದಾಗಿದೆ. ಅವರು ಸಾಮಾನ್ಯ ವಿಮೋಚನೆಗಿಂತ ಮುನ್ನವೇ ಮರಣಕ್ಕೆ ಒಳಗಾಗುತ್ತಾರೆ, ವಿಮೋಚನೆ ಬರುವಾಗ ಈ ಚೊಚ್ಚಲು ಮಕ್ಕಳಿಗೆ ಅದರಲ್ಲಿ ವಿಶೇಷ ಸ್ಥಾನಮಾನವಿರುತ್ತದೆ. ಅವರು ಸಾಮನ್ಯ ವಿಮೋಚನೆಯಲ್ಲಿ ವಿಶೇಷ ಕಾರ್ಯವನ್ನು ನೆರವೇರಿಸ ಬೇಕಾಗುತ್ತದೆ. ಯಾಕೆಂದರೆ ಅವರು ಲೇವಿಯರನ್ನು ಹೋಲುವ ಪ್ರತ್ಯೇಕಿಸಲ್ಪಟ್ಟ ವಿಶೇಷ ಕುಲ ದವರಾಗಿದ್ದು ಅವರು ಅವರ ಸಹೋದರರುಗಳಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆ. ಅವರ ನೆಲದಲ್ಲಿ ಅವರಿಗೆ ಸಂಪೂರ್ಣವಾದ ಬಾಧ್ಯತೆ ನೀಡಲಾಗಿದೆ, ನೂತನ ವ್ಯವಸ್ಥೆಯ ಪ್ರಕಾರ ಅವರು ಅವರ ಸಹೋದರರುಗಳಿಗೆ ಶಿಕ್ಷಕರಾಗಬಹುದಾಗಿದೆ.

ಈ ಕುಲ ಅಥವಾ ಲೇವಿಯ ಮನೆಯು ಸ್ಪಷ್ಟವಾಗಿ ವಿಶ್ವಾಸಿಗಳ ಮನೆಯವರನ್ನು ಪ್ರತಿನಿಧಿಸುತ್ತದೆ. ಇದು ನಂತರದಲ್ಲಿ ಸಿದ್ಧತೆಗೊಳ್ಳುತ್ತಿರುವ ರಾಜ ಯಾಜಕತ್ವವನ್ನು ಪ್ರತಿನಿಧಿಸುತ್ತದೆ. ಇದು ಲೌಕಿಕ ಸಂಗತಿಗಳ ಬಾಧ್ಯತೆಯನ್ನು ಸಹೋದರರುಗಳ ಪರವಾಗಿ ಬಿಟ್ಟುಕೊಡುವುದಾಗಿದ್ದು ಆದಷ್ಟು ಬೇಗನೇ ನಿಜವಾದ ರಾಜ ಯಾಜಕತ್ವವನ್ನು ಪಡಕೊಳ್ಳು ವುದಾಗಿದೆ. ಇದರ ಮಹಾ ಯಾಜಕನು ನಮ್ಮ ಕರ್ತನಾಗಿದ್ದಾನೆ ಮತ್ತು ಇದು ಸಹಸ್ರಮಾನ ಕಾಲದಲ್ಲಿ ಈ ಲೋಕವನ್ನು ಆಶೀರ್ವದಿಸುತ್ತದೆ, ಆಳುತ್ತದೆ ಮತ್ತು ಆದೇಶಿಸುತ್ತದೆ. ಐಗುಪ್ತದಲ್ಲಿದ್ದ ಇಸ್ರಾಯೇಲ್ಯರ ಚೊಚ್ಚಲು ಮಕ್ಕಳು ಮರಣಶಿಕ್ಷೆಗೆ ಒಳಗಾದರೂ ಮರಣವು ಅವರನ್ನು ದಾಟಿಹೋಗಿ ಅವರು ಅದರಿಂದ ಉಳಿದುಕೊಂಡಂತೆ, ಲೌಕಿಕ ಬಾಧ್ಯತೆಯನ್ನು ಕಳಕೊಳ್ಳುವುದರಿಂದ ಯಾಜಕತ್ವವನ್ನು ಪಡಕೊಳ್ಳುವಂತೆ ಚೊಚ್ಚಲುಮಕ್ಕಳ ಪ್ರತಿಸಂಕೇತವಾದ ಸಭೆಯು ನಿತ್ಯಜೀವಿತದ ಅಥವಾ ನಿತ್ಯ ಮರಣದ ಪರೀಕ್ಷೆಯನ್ನು ಉಳಿದ ಮಾನವಕುಲದವರಿಗಿಂತ ಮುಂಚಿತವಾಗಿಯೇ ಎದುರಿಸುತ್ತಾ ಎರಡನೆಯ ಮರಣಕ್ಕೆ ಒಳಪಡುತ್ತದೆಯಾದರೂ ತಮ್ಮ ವಿಮೋಚಕನ ರಕ್ತದ ನಿಮಿತ್ತ ಈ ಮರಣದಿಂದ ಪಾರಾಗುತ್ತದೆ.

ದೇವರ ಕೃಪೆಯಲ್ಲಿ ಭಾಗವಹಿಸಿ ಪರಲೋಕವನ್ನು ಅದರ ಸಂಮೃದ್ಧಿಯ ಜೀವಿತವನ್ನು ಪಡಕೊಳ್ಳುವ ಸಲುವಾಗಿ ಅವರು ಆತನೊಂದಿಗೆ ಈ ಲೋಕದ ಬಾಧ್ಯತೆಗಳನ್ನು, ಈ ಲೋಕದ ಭಾಗವನ್ನು, ಈ ಲೋಕದ ಜೀವಿತವನ್ನು ತಿರಸ್ಕರಿಸುತ್ತಾರೆ ಅಥವಾ ತ್ಯಾಗಮಾಡುತ್ತಾರೆ. ಆದುದರಿಂದ ಚೊಚ್ಚಲು ಮಕ್ಕಳ, ನೂತನ ಸೃಷ್ಟಿಯ ಸಭೆಯು ಮನುಷ್ಯರಂತೆ ಸಾಯುವಲ್ಲಿ ಮತ್ತು ಇತರರಿಗಿಂತ ಹೆಚ್ಚಾಗಿ ಈ ಲೋಕದ ಸಂಗತಿಗಳನ್ನು ಕಳಕೊಳ್ಳುವಾಗ ಅಥವಾ ತಿರಸ್ಕರಿಸುವಾಗ ಸ್ವಾಭಾವಿಕ ಮಾನವನು ಅರ್ಥಮಾಡಿಕೊಳ್ಳದ ರೀತಿಯಲ್ಲಿ ಇವರುಗಳು ಎರಡನೆಯ ಮರಣದಿಂದ ಪಾರಾಗುತ್ತಾರೆ ಅಥವಾ ಬಚಾಯಿಸಲ್ಪಡುತ್ತಾರೆ. ರಾಜ ಯಾಜಕತ್ವದಲ್ಲಿ ಅವರ ಮಹಾ ಯಾಜಕನಾದ ಯೇಸುವೊಡನೆ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳ ಸಹಭಾಗಿಗಳಾಗುತ್ತಾರೆ. ಇವರುಗಳ ಈ ಪಾರಾಗುವಿಕೆಯು ಸಹಸ್ರಮಾನ ಕಾಲದ ಉದಯದ ಹಾಗೂ ಅದರ ನೀತಿ ಸೂರ್ಯನು ಮೂಡುವ ಮೊದಲೇ ಸುವಾರ್ತಾಯುಗದ ರಾತ್ರಿಕಾಲದಲ್ಲಿಯೇ

ಉಂಟಾಗುತ್ತದೆ ಮತ್ತು ಇವರುಗಳು ಪಾಪ ಮತ್ತು ಸೈತಾನನಿಂದ ಬಿಡುಗಡೆ ಮಾಡುವ ಕರ್ತನ ಮಹಾಸಮೂಹದ ನಾಯಕರುಗಳಾಗಿತ್ತಾರೆ. *" ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವವೇದನೆ ಪಡುತ್ತಾ ಇರುತ್ತದೆಂದು ನಾವು ಬಲ್ಲೆವು"* ( ರೋಮ ೦೮:೨೨) ಮತ್ತು *"ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವುದು"* (ವ ೨೨) –(ಮಹಿಮೆ, ಗೌರವ ಮತ್ತು ನಿರ್ಲಯತ್ವಕ್ಕಾಗಿ ಮೊದಲನೆಯ ಪುನರುತ್ಥಾನದಲ್ಲಿ ಚೊಚ್ಚಲು ಮಕ್ಕಳ ಪಾರಾಗುವಿಕೆ) ಎಂಬ ಅಪೋಸ್ತಲನ ಮಾತುಗಳು ಇಲ್ಲಿ ಹೇಗೆ ಒಪ್ಪುತ್ತವೆಂಬುದನ್ನು ನಾವು ಗುರುತಿಟ್ಟು ಕೊಳ್ಳಬೇಕಾಗುತ್ತದೆ.

ಆದರೆ ಈಗ ನಮೂನೆಯ ಮತ್ತೊಂದು ಲಕ್ಷಣವು ಮುಖ್ಯವಾಗಿದೆ. ಚೊಚ್ಚಲುಮಕ್ಕಳ ಪಾರಾಗುವಿಕೆಗೆ ಮತ್ತು ಇದರ ಪರಿಣಾಮವಾಗಿ ಎಲ್ಲಾ ದೇವಜನರ ಬಿಡುಗಡೆಗಾಗಿ ಪಸ್ಕ ಕುರಿ ಮರಿಯನ್ನು ಕೊಯ್ಯುವ ಮತ್ತು ಅದರ ರಕ್ತವನ್ನು ಬಾಗಿಲಿನ ನಿಲುವುಗಂಬಕ್ಕೆ ಅಂದರೆ ಚೌಕಟ್ಟಿನ ಮೇಲಿರುವ ಕಲ್ಲು ಅಥವಾ ಮರದ ಕಂಬಕ್ಕೆ ಪ್ರೋಕ್ಷಿಸುವ ಮತ್ತು ಅದರ ಮಾಂಸವನ್ನು ಆ ರಾತ್ರಿ ಕಹಿ ಪಲ್ಯದೊಂದಿಗೆ, ಹುಳಿಯಿಲ್ಲದ ರೊಟ್ಟಿಯೊಡನೆ ತಿನ್ನುವ ಅಗತ್ಯವಿತ್ತು. ಈ ರೀತಿಯಲ್ಲಿ ಇಸ್ರಾಯೇಲ್ಯರ ಪ್ರತಿಯೊಂದು ಮನೆಯೂ ವಿಶ್ವಾಸಿಗಳ ಕುಟುಂಬವನ್ನು ಪ್ರತಿನಿಧಿಸುವುದಾಯಿತು ಮತ್ತು ಪ್ರತಿಯೊಂದು ಕುರಿಮರಿಯೂ ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರಿಮರಿಯನ್ನು ಪ್ರತಿನಿಧಿಸುವುದಾಯಿತು. ಪ್ರತಿಕುಟುಂಬದ ಚೊಚ್ಚಲು ಮಗುವು ದೇಹದ ಅಂದರೆ ನೂತನ ಸೃಷ್ಟಿಯ ಶಿರಸ್ಸಾಗಿರುವ ಕ್ರಿಸ್ತನನ್ನು ಪ್ರತಿನಿಧಿಸುತ್ತದೆ. ಕಹಿ ಪಲ್ಯವು ಈಗಿನ ಕಾಲದ ಕಷ್ಟ ಸಂಕಟಗಳನ್ನೂ ಪ್ರತಿನಿಧಿಸುವುದಾಗಿದ್ದು ವಿಶ್ವಾಸಿ ಕುಟುಂಬದವರ ಹಸಿವನ್ನು ಕುರಿಮರಿಗಾಗಿಯೂ, ಹುಳಿಯಿಲ್ಲದ ರೊಟ್ಟಿಗಾಗಿಯೂ ಕೆರಳಿಸುತ್ತದೆ. ಇದಕ್ಕೂ ಹೆಚ್ಚಾಗಿ ಪ್ರತಿ ಕುಟುಂಬದವರು ತಮ್ಮ ಕೈಯಲ್ಲಿ ದಂಡ ಹಿಡಿದು, ಪ್ರಯಾಣಕ್ಕೆ ಸಿದ್ಧರಾಗಿ ತಿನ್ನುವಾಗ ಪ್ರತಿ ಸಂಕೇತರಾದ ಚೊಚ್ಚಲು ಮಕ್ಕಳು ಮತ್ತು ವಿಶ್ವಾಸದ ಕುಟುಂಬದವರು ಸುವಾರ್ತಾ ಯುಗದ ರಾತ್ರಿಜಾವದಲ್ಲಿ ಪ್ರಯಾಣಿಕರಂತೆ, ಅಪರಿಚಿತರಂತೆ ಈ ಲೋಕದಲ್ಲಿ ಕಂಡುಬರುತ್ತಾರೆ. ಅವರು ಪಾಪ ಮತ್ತು ಮರಣದ ಬಂಧನವನ್ನು ಗ್ರಹಿಸುತ್ತಾರೆ ಮತ್ತು ಎಲ್ಲಾ ಪಾಪ ಮತ್ತು ಭ್ರಷ್ಟತೆಗಳಿಂದ ಕರ್ತನ ಮೂಲಕವಾಗಿ ವಿಮೋಚನೆ ಹೊಂದಿ ದೇವರ ಮಕ್ಕಳ ಸ್ವಾತಂತ್ರ್ಯಕ್ಕೆ ಮುನ್ನಡೆಯಲು ಬಯಸುತ್ತಾರೆ.

## *ನಮ್ಮ ಕರ್ತನ ಸ್ಮರಣೆ*

ವಸಂತ ಮಾಸದ ಹದಿನಾಲ್ಕನೆಯ ದಿನದಂದು– ಈ ದಿನವು ಯೆಹೂದ್ಯರು ಆಚರಿಸುವ ಏಳುದಿನಗಳ ಪಸ್ಕಹಬ್ಬಕ್ಕೆ ಮುಂಚಿತವಾಗಿ ಬರುವುದಾಗಿದೆ – ಪಸ್ಕಕುರಿಮರಿಯನ್ನು ಕೊಯ್ಯುವುದರ ಸಾಮರಸ್ಯದೊಂದಿಗೆ – ನಮ್ಮ ಕರ್ತನು ಪಸ್ಕ ಕುರಿಮರಿಯ ಪ್ರತಿ ಸಂಕೇತವಾಗಿ ಶಿಲುಬೆಯಲ್ಲಿ ಮರಣಹೊಂದಿದನು, ದೇವರ ಈ ಕುರಿಮರಿಯು ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವುದಾಗಿದೆ. ಬೇರೆ ಯಾವ ಸಮಯದಲ್ಲಿಯೂ ನಮ್ಮ ಕರ್ತನು ತನ್ನ ಮೂವತ್ತನೆಯ ವಯಸ್ಸಿನಲ್ಲಿ ಮರಣದೊಂದಿಗೆ ಮಾಡಿಕೊಂಡ ದೀಕ್ಷಾಸ್ನಾನದಲ್ಲಿ ಪ್ರಾರಂಭಿಸಿದ ತ್ಯಾಗವನ್ನು ಇಂಥಾಃ ಮರಣದಲ್ಲಿ ಪೂರ್ತಿಗೊಳಿಸಲು ಸಾಧ್ಯವಿದ್ದಿಲ್ಲ. ಈ ಕಾರಣದಿಂದ ಯೆಹೂದ್ಯರು ಹಲವುಸಾರಿ ಆತನನ್ನು ಕೊಲ್ಲಲು ಪ್ರಯತ್ನಿಸಿದರೂ ಆತನ ಮೇಲೆ ಕೈಮಾಡಲಾಗಲಿಲ್ಲ.

ಯಾಕೆಂದರೆ "***ಆತನ ಕಾಲವು ಇನ್ನೂ ಬಾರದೇ ಇದ್ದ ಕಾರಣ ಯಾರೂ ಆತನ ಮೇಲೆ ಕೈಹಾಕಲಿಲ್ಲ***" (ಯೋಹಾನ ೦೭:೩೦) ಎಂದು ಬರೆದದೆ.

ಮೊದಲನೆಯ ತಿಂಗಳ ಹತ್ತನೆಯ ದಿನದಂದು ಯಜ್ಞದ ಕುರಿಮರಿಯನ್ನು ಆಯ್ಕೆಮಾಡಬೇಕೆಂದು ಮತ್ತು ಅದನ್ನು ತಮ್ಮ ಮನೆಗಳಿಗೆ ಬರಮಾಡಿಕೊಳ್ಳಬೇಕೆಂದು ಯೆಹೂದ್ಯರಿಗೆ ಅಪ್ಪಣೆ ಇದ್ದುದರಿಂದ ನಮ್ಮ ಕರ್ತನು ಅದೇ ದಿನನದಲ್ಲಿ ತನ್ನನ್ನು ಅವರಿಗೆ ಅರ್ಪಿಸಿಕೊಟ್ಟನು. ಪಸ್ಕಹಬ್ಬದ ಐದು ದಿನಗಳ ಮುನ್ನ ಆತನು ಆ ನಗರಕ್ಕೆ ಕತ್ತೆಯ ಮೇಲೆ ಸವಾರಿ ಮಾಡಿಕೊಂಡು ಪ್ರವೇಶಿಸಿದನು. ಆಗ ಅಲ್ಲಿ ಗುಂಪು ಕೂಡಿದ ಜನರು "***ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ; ಇಸ್ರಾಯೇಲ್ಯರ ಅರಸನಿಗೆ ಆಶೀರ್ವಾದ***" (ಯೋಹಾನ ೧೨: ೧೩) ಎಂದು ಆರ್ಭಟಿಸಿದರು. "***ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು. ಆದರೆ ಸ್ವಂತ ಜನರು*** *(ಒಂದು ಜನಾಂಗವಾಗಿ)* ***ಆತನನ್ನು ಅಂಗೀಕರಿಸಲಿಲ್ಲ. ಯಾರ್ಯಾರು ಆತನನ್ನು*** *(ವ್ಯಕ್ತಿಗತವಾಗಿ)* ***ಅಂಗೀಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು***" (ಯೋಹಾನ ೦೧:೧೧-೧೨). ಜನಾಂಗವು ಅದರ ಪ್ರತಿನಿಧಿಗಳ ಮೂಲಕ, ಆಳ್ವಿಕೆ ಮಾಡುವವರ ಮೂಲಕ ಆತನನ್ನು ಅಂಗೀಕರಿಸುವುದರ ಬದಲಾಗಿ ಆತನನ್ನು ತಿರಸ್ಕರಿಸಿದರು. ಈ ರೀತಿಯಲ್ಲಿ ಅವರು ತಮ್ಮನ್ನು ಆ ಸಮಯದಲ್ಲಿ ವೈರಿಯೊಡನೆ ಗುರಿತಿಸಿಕೊಂಡರು. ಪರಂತು, ದೇವರ ಕೃಪೆಯಿಂದ ಹೊಸ ಒಡಂಬಡಿಕೆಯ ರಕ್ತವು ಯಾಕೋಬನ ಮನೆಯವರಿಗೂ, ಮತ್ತು ದೇವರೊಡನೆ ಸಾಮರಸ್ಯ ಬಯಸುವ ಎಲ್ಲರಿಗೂ ಫಲೋತ್ಪಾಧಕ ವಾಯಿತು ಮತ್ತು ಅವರು ಈ ಕುರಿಮರಿಯ ಮೌಲ್ಯದಲ್ಲಿ ಸಹಭಾಗಿಗಳಾದರು. ಆದರೂ ಅವರು ಈ ಪ್ರತಿಸಂಕೇತವಾದ ಕುರಿಮರಿಯನ್ನು ತಿನ್ನಲು ನಿರಾಕರಿಸಿದ ಕಾರಣ ಅವರು ಚೊಚ್ಚಲು ಮಕ್ಕಳ ಜನಾಂಗವಾಗುವ, ರಾಜಯಾಜಕತ್ವದ, ಪವಿತ್ರ ವಂಶದ ಸದಸ್ಯರಾಗುವ, ಮೆಸ್ಸೀಯನ ವೈಶಿಷ್ಟ್ಯ ಪೂರ್ಣ ಜನರಾಗುವ ಸದವಕಾಶವನ್ನು ಕಳೆದುಕೊಂಡರು – ಅವರು ಪಾರಾಗುವ, ನೂತನ ಸೃಷ್ಟಿಯ ಸದಸ್ಯರಾಗಿ ಜೀವನದಲ್ಲಿ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಸಮೃದ್ಧಿಯಾಗಿ ಹೊಂದಿಕೊಳ್ಳುವ ಅವಕಾಶವನ್ನೂ ಕಳಕೊಂಡರು : ಆದರೆ ಸತ್ಯವೇದದ ಬೇರೆಡೆಯಲ್ಲಿ ಆದರೆ ಅವರು ಹೇಗೂ ದೇವರ ಕುರಿಮರಿಯನ್ನು ಅಂಗೀಕರಿಸುವ, ಆತನ ದೇಹವನ್ನು ತಿನ್ನುವ ಸಮರ್ಪಣೆಯನ್ನು ಸ್ವಂತಕ್ಕೆ ಬಳಿಸಿಕೊಳ್ಳುವ ಮತ್ತೊಂದು ಭವ್ಯ ಅವಕಾಶವನ್ನು ಹೊಂದಲಿದ್ದಾರೆ ಮತ್ತು ಆ ಮೂಲಕ ಮರಣ ಮತ್ತು ಪಾಪದ ಬಂಧನದಿಂದ ಕರ್ತನ ಮತ್ತು ಇಸ್ರಾಯೇಲ್ಯರ ಪ್ರತಿಸಂಕೇತವಾದ ನಿಷ್ಠಾವಂತ ಸಹೋದರರುಗಳ ಅಂದರೆ ಆತನ ಚೊಚ್ಚಲು ಮಕ್ಕಳ ಸಭೆಯಾದ ನೂತನ ಸೃಷ್ಟಿಯ ನಾಯಕತ್ವದಲ್ಲಿ ಪಾರಾಗುತ್ತಾರೆಂಬುದನ್ನು ಕೇಳಿ ನಾವು ಸಂತೋಷಿಸುತ್ತೇವೆ. (ರೋಮ ೧೧:೧೧-೨೬ ನೋಡಿರಿ).

ನಮ್ಮ ಕರ್ತನು ತನ್ನ ಸೇವೆಯ ಅಂತ್ಯದಲ್ಲಿ, ಆತನು ವಿಶ್ವಾಸಘಾತುಕತನಕ್ಕೆ ತುತ್ತಾದ ಮತ್ತು ಅದೇ ದಿನ ಆತನು ಕುರಿಮರಿಯ ಪ್ರತಿಸಂಕೇತವಾಗಿ ಮರಣಹೊಂದಿದ ಮೊದಲನೆಯ ತಿಂಗಳ ಹದಿನಾಲ್ಕನೇ ದಿನದ ರಾತ್ರಿಯಲ್ಲಿ ಆತನು ಯೆಹೂದ್ಯರ ಸಾಂಕೇತಿಕ ಪಸ್ಕದ ಊಟವನ್ನು ತನ್ನ ಹನ್ನೆರಡು ಮಂದಿ ಅಪೋಸ್ತಲರೊಂದಿಗೆ ಮಾಡಿದನು ಸಂಕೇತಿಕ ಕುರಿಮರಿಯಾಗಿ ಆತನು ತಾನೇ ಪ್ರತಿನಿಧಿಸಲ್ಪಟ್ಟು ಲೋಕದ ಪಾಪಕ್ಕಾಗಿ ತನ್ನನ್ನೇ ಬಲಿಯಾಗಿ ಅರ್ಪಿಸಿದನು. ನಿಜವಾಗಿಯೂ ಇದರ ಮಾಂಸದ ಶಕ್ತಿಯಲ್ಲಿ ದೇವರ ಮಕ್ಕಳಿಗೆ ಮಾತ್ರವೇ ಜೀವ, ಸ್ವಾತಂತ್ರ್ಯ ಮತ್ತು

ಆಶೀರ್ವಾದಗಳು ಲಭ್ಯವಾಗುತ್ತವೆ. ನಮ್ಮ ಕರ್ತನು ಮರಣ ಹೊಂದಿದ ದಿನದ ಮುನ್ನಾ ರಾತ್ರಿಯಲ್ಲಿ ಮಾಡಿದ ಪಸ್ಕದ ಊಟವನ್ನು ಯೆಹೂದ್ಯರು ಅದೇ ದಿನದ ಸಂಜೆಯ ವೇಳೆಯಲ್ಲಿ ಮಾಡಲು ಸಾಧ್ಯವಾಗಿತ್ತು, ಮಧ್ಯರಾತ್ರಿಯ ವೇಳೆಯಲ್ಲಲ್ಲ. ನಮ್ಮ ಕರ್ತನು ಎಲ್ಲಾ ಸಂಗತಿಗಳನ್ನೂ ಇಸ್ರಾಯೇಲ್ಯರ ಅನುಸರಣೆಗೆ ತಕ್ಕಂತೆ ಸ್ಪಷ್ಟವಾದ ರೀತಿಯಲ್ಲಿ ವ್ಯವಸ್ಥೆಗೊಳಿಸಿದ್ದನು.

ಯೆಹೂದ್ಯರು ಧರ್ಮಶಾಸ್ತ್ರಾಧೀನರಾಗಿ ಜನಿಸಿರುವುದರಿಂದ, ನಮ್ಮ ಕರ್ತನಿಗೂ ಮತ್ತು ಆತನ ಅಪೋಸ್ತಲರಿಗೂ ಈ ವಿಧಾನವನ್ನು ಆಚರಿಸುವುದು ನಿರ್ಬಂಧವಾಗಿತ್ತು ಮತ್ತು ಅದು ಸೂಕ್ತ ಸಮಯವೂ ಆಗಿತ್ತು. ಅವರು ಈ ರೀತಿಯಲ್ಲಿ ಯೆಹೂದ್ಯ ಪಸ್ಕವನ್ನು ಕುರಿಮರಿಯನ್ನು ಹುಳಿಯಿಲ್ಲದ ರೊಟ್ಟಿ ಮತ್ತು ಕಹಿ ಪಲ್ಯದೊಂದಿಗೆ ತಿಂದು ಮತ್ತು ಬಹುಶಃ ಸಾಂಪ್ರದಾಯಿಕವಾದ ದ್ರಾಕ್ಷಾರಸವನ್ನು ಕುಡಿದು ಆಚರಿಸಿದ ಮೇಲೆ ನಮ್ಮ ಕರ್ತನು ಯೆಹೂದ್ಯ ಪಸ್ಕ ಊಟವಾದ ಉಳಿದ ಹುಳಿಯಿಲ್ಲದ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತೆಗೆದುಕೊಂಡು ತನ್ನ ಶಿಷ್ಯರಿಗೂ, ಮತ್ತು ಅವರು ಪ್ರತಿನಿಧಿಸುವ (ಯೋಹಾನ ೧೭:೨೦ನೋಡಿರಿ) ಆತ್ಮೀಕ ಇಸ್ರಾಯೇಲ್ಯರೂ, ಚೊಚ್ಚಲು ಮಕ್ಕಳ ಸಭೆಯವರೂ ಆದ ತನ್ನ ಸಮಸ್ತ ಸಭೆಗೆ ಒಂದು ಮಾದರಿಯಾಗಿ ಯೆಹೂದ್ಯ ಪಸ್ಕವನ್ನು ನಿವೃತ್ತಿಗೊಳಿಸಿ ಇದನ್ನು ಪ್ರತಿಷ್ಟಾಪಿಸಿದನು. ನಮ್ಮ ಕರ್ತನು ಯಾವುದೇ ಬೇರೆ ರೀತಿಯ ಅಥವಾ ಇನ್ನೂ ಉತ್ತಮವಾದ ಪಸ್ಕವನ್ನು ನೇಮಿಸಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಈ ನಮೂನೆಯು ಅದರ ನೆರವೇರಿಕೆಯ ಪ್ರಾರಂಭದ ಕುರಿತಾಗಿಯೇ ಇತ್ತು. ಆದುದರಿಂದ ನೆರವೇರಿಕೆಯನ್ನು ಒಪ್ಪಿಕೊಂಡವರಿಗೆ ಇನ್ನುಮುಂದೆ ಇದು ಸೂಕ್ತವಾದುದಲ್ಲ. ಈ ಅಧ್ಯಾಯದ ಪ್ರಾರಂಭದಲ್ಲಿಯೇ ಅಪೋಸ್ತಲನು ಹೇಳಿರುವಂತೆ ನಮ್ಮ ಕರ್ತನು ಕುರಿಮರಿಯ ಪ್ರತಿಸಂಕೇತವಾಗಿ ಸಧ್ಯದಲ್ಲಿಯೇ ಕೊಯ್ಯಲ್ಪಡುವವನಾಗಿದ್ದನು. – **"ನಮ್ಮ ಪಸ್ಕ ಕುರಿಮರಿಯಾದ ಕ್ರಿಸ್ತನು ಕೊಯ್ಯಲ್ಪಟ್ಟಿದ್ದಾನೆ "**

ಕ್ರಿಸ್ತನನ್ನು ಪಸ್ಕ ಕುರಿಮರಿಯನ್ನಾಗಿ ಅಂಗೀಕರಿಸುವ ಮತ್ತು ಆ ಮೂಲಕವಾಗಿ ಪ್ರತಿಸಂಕೇತವನ್ನು ಸಂಕೇತದ ಸ್ಥಾನದಲ್ಲಿ ಸ್ವೀಕರಿಸುವ ಯಾರೂ ಇನ್ನುಮುಂದೆ ಔಚಿತ್ಯವಾಗಿ ಸಾಂಕೇತಿಕ ಕುರಿಮರಿಯನ್ನು ಸಾಂಕೇತಿಕ ಬಿಡುಗಡೆಯ ಸ್ಮರಣಾರ್ಥ ಸಿದ್ಧಪಡಿಸುವುದಿಲ್ಲ. ಯೇಸುವನ್ನು ನಿಜವಾದ ಪಸ್ಕದ ಕುರಿಮರಿಯೆಂದು ನಂಬುವ ಎಲ್ಲಾ ವಿಶ್ವಾಸಿಗಳಿಗೆ ಅಂದಿನಿಂದ ಯುಕ್ತವಾದುದು ತಮ್ಮ ಹೃದಯದ ಮೆಟ್ಟಿಲುಗಳಿಗೆ ಆತನ ರಕ್ತದಿಂದ ಪ್ರೋಕ್ಷಿಸುವುದು " ತಮ್ಮ ಹೃದಯಗಳನ್ನು ಕೆಡುಕಿನ ಪ್ರಜ್ಞೆಯಿಂದ ಪ್ರೋಕ್ಷಿಸಿಕೊಳ್ಳುವುದು" - ( ಪ್ರಸ್ತುತ ದಂಡನೆಯಿಂದ – ತಮ್ಮ ಪಾಪಗಳು ಆತನ ರಕ್ತದ ಮುಖಾಂತರ ಪರಿಮಾರ್ಜನಗೊಂಡಿತೆಂದು ಗ್ರಹಿಸಿಕೊಳ್ಳುವುದು ಮತ್ತು ಆತನ ರಕ್ತದ ಮೂಲಕ ಅವರು ಈಗ ಪಾಪಕ್ಷಮಾಪಣೆಯನ್ನು ಹೊಂದಿಕೊಳ್ಳುವುದು). ಇವರುಗಳು ಇನ್ನು ಮುಂದೆ ತಮ್ಮ ಕರ್ತನ ಒಳ್ಳೆಯತನವನ್ನು, ಎಲ್ಲರಿಗಾಗಿ ಈಡುಬಲಿಯಾದ ಯೇಸುಕ್ರಿಸ್ತನೆಂಬ ಮಾನವನ ಅರ್ಹತೆಯನ್ನು ಸವಿಯಬೇಕು ಇಲ್ಲವೆ ತಮಗಾಗಿ ಬಳಿಸಿಕೊಳ್ಳ ಬೇಕು. ವಿಶ್ವಾಸದಿಂದ ಅವರುಗಳು ಆ ಅರ್ಹತೆಗಳಲ್ಲಿ ಭಾಗವಹಿಸಬೇಕು ಮತ್ತು ತಮ್ಮ ಪಾಪಗಳು ಕರ್ತನ ಮೇಲೆ ಹೇರಲ್ಪಟ್ಟಾಗ ಆತನು ಅವರಿಗಾಗಿ ಮರಣಹೊಂದಿದನು ಆದುದರಿಂದ ಆತನ ಒಳ್ಳೆಯತನಗಳು ಮತ್ತು ನೀತಿವಂತಿಕೆಯು ಅವರಿಗಾಗಿ ಆರೋಪಿಸಲ್ಪಟ್ಟಿವೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಹೀಗಾಗಿ ಈ ವಸ್ತುಗಳನ್ನು ಅವರು ತಿನ್ನುತ್ತಾರೆ ಅಥವಾ ವಿಶ್ವಾಸದ ಮೂಲಕವಾಗಿ ಬಳಿಸಿಕೊಳ್ಳುತ್ತಾರೆ.

ಹಾಗಾದರೆ, ನಮ್ಮ ಕರ್ತನ ರಾತ್ರಿ ಭೋಜನವು ಪಸ್ಕಭೋಜನದ ಸ್ಥಾನವನ್ನು ತೆಗೆದು ಕೊಂಡಿರುವುದೇ ಆದರೂ ಅದು ಉಚ್ಚ ಮಟ್ಟದಲ್ಲವಾದರೆ – ಅದರ ಪ್ರತಿಸಂಕೇತವೊಂದು ಪ್ರಾರಂಭವಾಗಿದೆ – ಅದು ಏನು? ಎಂಬ ಪ್ರಶ್ನೆಗೆ ನಾವು ಇದು ಪ್ರತಿ ಸಂಕೇತದ ಸ್ಮರಣೆ ಎಂದು ಉತ್ತರಿಸುತ್ತೇವೆ. ಇದು ಆತನ ಹಿಂಬಾಲಿಕರಿಗೆ ಪ್ರತಿಸಂಕೇತ ಪಸ್ಕದ ನೆರವೇರಿಕೆಯನ್ನು ನೆನಪು ಮಾಡುವುದಾಗಿದೆ.

ಈ ರೀತಿಯಲ್ಲಿ ನಮ್ಮ ಕುರಿಮರಿಯನ್ನು ಅಂಗೀಕರಿಸುವುದು ಮತ್ತು ಆ ಮೂಲಕ ಆತನು ನಮಗಾಗಿ ಮರಣಪಟ್ಟದ್ದನ್ನು ಸ್ಮರಿಸುವುದು ಅಂದರೆ ದೇವಜನರ ಬಿಡುಗಡೆಯನ್ನು ನಿರೀಕ್ಷಿಸುವುದು. ಆದುದರಿಂದ ಇದು ಈ ಲೋಕದಲ್ಲಿರುವಾಗ ಯಾರು ಇದನ್ನು ಬುದ್ಧಿ ಪೂರ್ವಕವಾಗಿ ಮೆಚ್ಚಿಕೊಳ್ಳುತ್ತಾರೊ ಮತ್ತು ಸ್ಮರಿಸಿಕೊಳ್ಳುತ್ತಾರೋ ಅವರು ಈ ಲೋಕದವರಲ್ಲ. ಅವರುಗಳು ಯಾತ್ರಿಕರೂ ಮತ್ತು ಅಪರಿಚಿತರೂ ಆಗಿದ್ದಾರೆ ಮತ್ತು ಅವರು ಹೆಚ್ಚಿನ ನಿರೀಕ್ಷಣಾ ಪರಿಸ್ಥಿತಿಯನ್ನು ಬಯಸುತ್ತಾರೆ, ಹಾಗೂ ಪಾಪ ಮತ್ತು ಮರಣದ ಆಳ್ವಿಕೆಗೆ ಒಳಪಟ್ಟ ಈ ಲೋಕದ ಕೆಡಕು, ದುಃಖ ಮತ್ತು ಬಂಧನಗಳಿಂದ ಮುಕ್ತರಾಗಿದ್ದಾರೆ. ಇವರು ನಿಜವಾದ ಮತ್ತು ಹುಳಿಯಿಲ್ಲದ ರೊಟ್ಟಿಯಲ್ಲಿ ಪಾಲುತೆಗೆದುಕೊಳ್ಳುತ್ತಾರೆ. ಅವರು ಅದನ್ನು ಮಾನವ ವಿಚಾರ ಸರಣಿಯ ಯಾವ ಅಶುದ್ಧತೆಯೂ (ಹುಳಿಯೂ), ಕೆಡಕೂ, ಆಕಾಂಕ್ಷೆಗಳೂ, ಸ್ವಾರ್ಥತೆ ಮುಂತಾದವುಗಳು ಇಲ್ಲದಂತೆ ಪರಿಶುದ್ಧತೆಯಲ್ಲಿಯೂ ಇರುವುದರಿಂದ ಅವರು ಕರ್ತನಲ್ಲಿ ಮತ್ತು ಆತನ ಶಕ್ತಿಯಲ್ಲಿ ಬಲಗೊಳ್ಳುವಂಥಾಃ ರೀತಿಯಲ್ಲಿ ಅದನ್ನು ಬಯಸುತ್ತಾರೆ. ಅವರು ಸೇವಕನು ತಮ್ಮ ಕರ್ತನಿಗಿಂತ ದೊಡ್ಡವನಲ್ಲ ಎಂಬ ತಮ್ಮ ಒಡೆಯನ ಮಾತುಗಳ ಪ್ರಕಾರ ತಮ್ಮನ್ನು ಪೀಡಿಸಿಕೊಳ್ಳುವಂತೆ ಕಹಿಪಲ್ಯದಲ್ಲಿಯೂ ಪಾಲುತೆಗೆದುಕೊಳ್ಳುತ್ತಾರೆ. ಕರ್ತನು ತಾನೇ ನಿಂದನೆಗೂ, ಪೀಡನೆಗೂ ಮತ್ತು ತಿರಸ್ಕಾರಕ್ಕೂ ಒಳಗಾಗಿರುವುದಾದರೆ ಅವರು ಸಹಾ ತಮಗೂ ಅಂತಹುದೇ ರೀತಿಯ ನಡಿಸಿಕೊಳ್ಳುವಿಕೆಯನ್ನು ನಿರೀಕ್ಷಿಸುತ್ತಾರೆ. ಯಾಕೆಂದರೆ, ಈ ಲೋಕವು ಹೇಗೆ ಆತನನ್ನು ಅರಿಯಲಿಲ್ಲವೋ ಅದೇ ರೀತಿ ಅವರನ್ನೂ ಅರಿತಿಲ್ಲ. ಹೌದು, ಯಾರ ಪ್ರಾಮಾಣಿಕತೆಯು ಈ ಲೋಕದ ಅವಕೃಪೆಯನ್ನು ಅವರ ಮೇಲೆ ಬರಮಾಡುವುದಿಲ್ಲವೋ ಅವರ್‍ಯಾರೂ ಆತನಿಗೆ ಅಂಗೀಕಾರವಲ್ಲ. ಆತನು ಹೇಳಿದ್ದೇನೆಂದರೆ : " ***ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸಪಡಿರಿ***" (ಮತ್ತಾಯ ೦೫:೧೧) (ಮತ್ತಾಯ ೧೨:೨ ಮತ್ತು ೨ ತಿಮೋಥೆ ೦೩:೧೨ ಇವುಗಳನ್ನೂ ನೋಡಿರಿ.) ಎಂಬುದಾಗಿ.

ನಮ್ಮ ಕರ್ತನು ತನ್ನ ಸ್ಮರಣಾರ್ಥವಾಗಿ ಕಡೆಯ ಭೋಜನವೆಂದು ಕರೆಯಲ್ಪಡುವ ಈ ರಾತ್ರಿಭೋಜನವನ್ನು ಸ್ಥಾಪಿಸಿದಾಗ ಮೇಲಿನಂತೆ ಹಳೆಯ ಪಸ್ಕದ ಮೇಲೆ ಅದರ ಭಾಗವಲ್ಲದಿದ್ದರೂ ಅದು ಅದಕ್ಕೆ ಸಂಬಂಧಿಸಿದಂತೆ ಕಟ್ಟಲ್ಪಟ್ಟ ಒಂದು ನೂತನ ಕುರುಹಾಗಿ ಪ್ರತಿಸಂಕೇತದ ಸ್ಮರಣಾರ್ಥವಾಯಿತು. ನಾವು ಓದುವಂತೆ ***"ತಾನು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ಆತನು ರೊಟ್ಟಿಯನ್ನು ತೆಗೆದುಕೊಂಡು ಸ್ತ್ರೋತ್ರ ಮಾಡಿ ತನ್ನ ಶಿಷ್ಯರಿಗೆ ಕೊಟ್ಟು – ತೆಗೆದುಕೊಂಡು ತಿನ್ನಿರಿ, ಇದು ನಿಮಗೋಸ್ಕರ ಮುರಿಯಲ್ಪಟ್ಟಿರುವ*** (ಇದು ಕುರಿಮರಿಯ ಪ್ರತಿಸಂಕೇತನಾದ ನನ್ನನ್ನು, ನನ್ನ ದೇಹವನ್ನು ಪ್ರತಿನಿಧಿಸುತ್ತದೆ) ***ನನ್ನ ದೇಹ ; ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು***" ( ಮಾರ್ಕ ೧೪:೨೨). ನಮ್ಮ ಕರ್ತನ ಸ್ಪಷ್ಟವಾದ ಉದ್ದೇಶವು ತನ್ನ

ಅನುಯಾಯಿಗಳ ಮನಸ್ಸನಲ್ಲಿ ಆತನೇ ತನ್ನ ಚೊಚ್ಚಲು ಮಕ್ಕಳಿಗೆ, ವಿಶ್ವಾಸದ ಮನೆಯವರಿಗೆ ಪ್ರತಿಸಂಕೇತವಾದ ದೇವರ ಕುರಿಮರಿಯಾಗಿದ್ದಾನೆ ಎಂಬುದನ್ನು ದೃಢಪಡಿಸುವುದು. ***" ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ"*** ಎಂಬುದು ತನ್ನ ಅನುಯಾಯಿಗಳಲ್ಲಿ ಈ ನೂತನ ಸಂಸ್ಕಾರವನ್ನು ಹಳೆಯದರ ಸ್ಥಾನವನ್ನು ಆಕ್ರಮಿಸಿಕೊಳ್ಳಬೇಕು ಮತ್ತು ಹಳೆಯದು ಯಶಸ್ವಿಯಾಗಿ ಪೂರೈಸಿರುವ ಕಾರಣ ಅದು ಇನ್ನು ಮುಂದೆ ಬಳಕೆಯಲ್ಲಿರದು ಎಂಬ ಅಭಿಪ್ರಾಯ ವನ್ನುಂಟು ಮಾಡುತ್ತದೆ. ***"ಊಟವಾದ ಮೇಲೆ ಅದೇ ಪ್ರಕಾರ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟು – ಇದರಲ್ಲಿರುವುದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಹೊಸ ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ನಿಮಗೋಸ್ಕರವೂ ಬಹು ಜನರಿಗೋಸ್ಕರವೂ ಸುರಿಸಲ್ಪಡುವ ರಕ್ತ; ಇದರಲ್ಲಿ ಪಾನಮಾಡುವಾಗಲೆಲ್ಲಾ ನನ್ನನ್ನು ನೆನಸಿ ಕೊಳ್ಳುವುದಕ್ಕೋಸ್ಕರ ಪಾನ ಮಾಡಿರಿ" ಅಂದನು*** (ಮಾರ್ಕ ೧೪: ೨೩–೨೪) ಸಮಯ ಮತ್ತು ಕಾಲವನ್ನು ಗಣಿಸದೆ ಇದನ್ನು ನೆರವೇರಿಸುವ ಅಭಿಪ್ರಾಯವು ನಮಗೆ ಅರ್ಥವಾಗುವುದಿಲ್ಲ. ಆದರೆ ಈ ಪಾತ್ರೆ ಮತ್ತು ಹುಳಿಯಿಲ್ಲದ ರೊಟ್ಟಿಯು ಅಂದಿನಿಂದ ಪಸ್ಕಹಬ್ಬದಲ್ಲಿ ಉಪಯೋಗಿಸ ಲ್ಪಡುತ್ತಿದೆ ಎಂಬ ಸೂಚನೆ ನಮಗೆ ದೊರೆಯುತ್ತದೆ. ಇದನ್ನೂ ಎಲ್ಲಾ ಸಂಧರ್ಭಗಳಲ್ಲಿಯೂ ಒಂದು ಆಚರಣೆಯನ್ನಾಗಿ ಪರಿಗಣಿಸ ಬೇಕೇ ಹೊರತು ಸಂಕೇತವಾಗಿ ಅಲ್ಲ, ಆದರೆ, ಪ್ರತಿ ಸಂಕೇತವಾಗಿ. ಪಸ್ಕವನ್ನು ಕರ್ತನು ನಿಗಧಿಪಡಿಸದೇ ಇರುವ ಸಮಯದಲ್ಲಿ ಇದನ್ನು ಆಚರಿಸುವುದು ನ್ಯಾಯಬದ್ಧವಲ್ಲ, ಉಚಿತವಾದುದ್ದಲ್ಲ ಅಥವಾ ಸಂಕೇತಿಕವೂ ಅಲ್ಲ. ಅದರಂತೆ ಇದನ್ನು ಅದರ ವಾರ್ಷಿಕೋತ್ಸವದಲ್ಲಿ ಅಲ್ಲದೇ ಬೇರೆ ಸಮಯಗಳಲ್ಲಿ ಪ್ರತಿಸಾಂಕೇತಿಕವಾಗಿ ಆಚರಿಸುವುದು ಸಹಾ ಉಚಿತವೆನಿಸದು.

***"ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ"*** (ವ ೨೬) ಎಂಬುದಾಗಿ ಕರ್ತನು ತನ್ನ ಮಾತುಗಳನ್ನು ಮುಂದುವರಿಸುತ್ತಾನೆ. ಕರ್ತನ ಅನುಯಾಯಿಗಳೆಲ್ಲರಿಗೆ ವಾರ್ಷಿಕ ಪಸ್ಕ ಹಬ್ಬದ ಆಚರಣೆಯು ಇನ್ನುಮುಂದೆ ನೂತನ ಅರ್ಥವನ್ನು ಕೊಡುವುದಾಗಿದೆ ಎಂದು ಶಿಷ್ಯರು ಅರ್ಥಮಾಡಿಕೊಂಡಿದ್ದರು ಎಂಬುದನ್ನು ಇದು ಸ್ಪಷ್ಟವಾಗಿ ನಮಗೆ ತೋರಿಸುತ್ತದೆ. ಮುರಿದ ರೊಟ್ಟಿಯು ಕರ್ತನ ದೇಹವನ್ನು, ಪಾತ್ರೆಯು ಆತನ ಪರಿಶುದ್ಧ ರಕ್ತವನ್ನು ಪ್ರತಿನಿಧಿಸುತ್ತದೆ. ಈ ನೂತನ ಸಂಸ್ಕಾರವು ಒಂದು ರೀತಿಯ ನಿಯಮವಾಗಿ ಆತನ ಅನುಯಾಯಿಗಳಿಗೆ ವಿಧಿಸಲ್ಪಡದಿದ್ದರೂ, ಇದರ ಯುಕ್ತವಾದ ಆಚರಣೆ ಮಾಡದೇ ಹೋದಲ್ಲಿ ಯಾವುದೇ ದಂಡವು ಅದಕ್ಕೆ ಇಲ್ಲದಿರುವುದರಿಂದ ಕರ್ತನು ತನ್ನನ್ನು ನಂಬುವವರೆಲ್ಲರೂ ಮತ್ತು ಆತನನ್ನು ಪಸ್ಕ ಕುರಿಮರಿಯ ಪ್ರತಿಸಂಕೇತವಾಗಿ ಮೆಚ್ಚಿಕೊಳ್ಳುವವರೆಲ್ಲರೂ ಆತನು ಸಲಹೆಮಾಡಿದ ಈ ಸ್ಮರಣೆಯನ್ನು ಮಾಡಲು ಸಂತೋಷಿತ್ತಾರೆಂದು ಬಲ್ಲವನಾಗಿದ್ದಾನೆ. ಇದರಂತೆ ಈ ವರೆಗೂ ಇದೆ. ಈಡು ಬಲಿಯಲ್ಲಿ ವಿಶ್ವಾಸವು ಈ ಸರಳವಾದ ಸ್ಮರಣೆಯಲ್ಲಿ ಆತನು ತಿರುಗಿ ಬರುವವರೆಗೆ ಒಂದು ದೃಷ್ಟಾಂತವಾಗಿ ಮುಂದುವರೆಯುತ್ತದೆ. – ನಮ್ಮ ಕರ್ತನ **parousia** ಅಥವಾ ಪ್ರಸನ್ನತೆಯಲ್ಲಿ ಮಾತ್ರವೇ ಅಲ್ಲ, ಸುಗ್ಗಿಯ ಕಾಲದಲ್ಲಿ, ಈ ಯುಗದ ಅಂತ್ಯದವರೆಗೆ, ಆದರೆ ಆತನ **parousia** ಅತನ ವಿಶ್ವಾಸಿಗಳು ಒಬ್ಬೊಬ್ಬರಾಗಿ ಪರದೆಯ ಆಚೆಗೆ ಕೂಡಿಬಂದು ಅಲ್ಲಿ ಇನ್ನೂ ಪೂರ್ಣಪ್ರಮಾಣದಲ್ಲಿ ಭಾಗವಹಿಸುವರು ಮತ್ತು ನಮ್ಮ ಕರ್ತನು ಪ್ರಕಟಿಸಿದಂತೆ ಇದರಲ್ಲಿ ಭಾಗವಹಿಸುವರು **"ಆತನ ರಾಜ್ಯದಲ್ಲಿ ಹೊಸಬರಾಗಿರುವರು"**

## *"ನಾವು ಅನೇಕರಾಗಿದ್ದಾಗ್ಯೂ ಒಂದೇ ರೊಟ್ಟಿ ಆಗಿದ್ದೇವೆ"*

*" .ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ರೊಟ್ಟಿಯು ಒಂದೇ ಆಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ. ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತಕ್ಕೊಂಡು ತಿನ್ನುತ್ತೇವೆ" ( ೧ ಕೊರಿ ೧೦ : ೧೬-೧೭)*

ಅಪೋಸ್ತಲನು ದೇವರಾತ್ಮನ ಪ್ರೇರಣೆಯಿಂದ ಇಲ್ಲಿ ನಮ್ಮ ಮುಂದೆ ನಮ್ಮ ಕರ್ತನು ಸ್ಥಾಪಿಸಿದ ಸ್ಮರಣೆಯ ಬಗ್ಗೆ ಒಂದು ಅತಿರಿಕ್ತ ಆಲೋಚನೆಯನ್ನು ನೀಡುವವನಾಗಿದ್ದಾನೆ. ಪ್ರಾಥಮಿಕವಾಗಿ ರೊಟ್ಟಿಯು ನಮಗೋಸ್ಕರವಾಗಿ ಅರ್ಪಿಸಲ್ಪಟ್ಟ ನಮ್ಮ ಕರ್ತನ ಮುರಿದ ದೇಹವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಆತನು ಇಲ್ಲಿ ಅಲ್ಲಗಳೆಯದೇ ಪುಷ್ಟೀಕರಿಸುತ್ತಾನೆ ಮತ್ತು ಪಾತ್ರೆಯು ನಮ್ಮ ಕ್ಷಮಾಪಣೆಯನ್ನು ಮುದ್ರಿಸುವ ಆತನ ರಕ್ತವನ್ನು ಪ್ರತಿನಿಧಿಸುತ್ತದೆ. ಈಗ ಇದರೊಂದಿಗೆ ನಾವುಗಳು ಒಂದು ಪವಿತ್ರ ಕ್ರೈಸ್ತಸಭೆಯ ಸದಸ್ಯರಾಗಿ , ಕ್ರಿಸ್ತನ ದೇಹದ ಅಂಗಗಳೂ, ಪ್ರತೀಕ್ಷಿತ ಚೊಚ್ಚಲ ಮಕ್ಕಳು, ನೂತನ ಸೃಷ್ಟಿಗಳು, ಕರ್ತನ ಮರಣದಲ್ಲಿ ಮತ್ತು ಆತನ ತ್ಯಾಗದಲ್ಲಿ ಪಾಲುಗಾರರು ಆಗಿದ್ದೇವೆ ; ಮತ್ತೊಂದೆಡೆ ಆತನು **"ಕ್ರಿಸ್ತನ ಸಂಕಟದೊಳಗೆ ಇನ್ನೂ ಉಳಿದಿದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ಶರೀರದಲ್ಲಿ ಅನುಭವಿಸುವುದು"** ನಮ್ಮ ಒಡಂಬಡಿಕೆಯ ಭಾಗವಾಗಿದೆ ಎಂದು ಹೇಳುತ್ತಾನೆ (ಕೊಲಸ್ಸೆ ೦೧:೨೪ ನೋಡಿರಿ). ಇಲ್ಲಿ ವ್ಯಕ್ತವಾಗುವ ಆಲೋಚನೆಯು **" ನಾವು ಆತನ ಮರಣದಲ್ಲಿ ಪಾಲುಗಾರರಗಿದ್ದೇವೆ"** ಎಂಬ ಮಾತುಗಳಿಗೆ ಸಮವಾಗಿದೆ. ಈ ರೀತಿಯಲ್ಲಿ ನಮ್ಮ ಕರ್ತನ ದೇಹವು ರೊಟ್ಟಿಯಂತೆ ಈ ಲೋಕಕ್ಕಾಗಿ ಮುರಿಯಲ್ಪಟ್ಟಿರುವಾಗ, ಸುವಾರ್ತಾ ಯುಗದ ವಿಶ್ವಾಸಿಗಳು , ಪ್ರಾಮಾಣಿಕರು, ಆಯ್ಕೆಗೊಂಡವರು, ನೂತನ ಸೃಷ್ಟಿಗಳು ಆದ ನಾವು ಆತನ ಆತನ ಆ ಒಂದೇ ರೊಟ್ಟಿಯ ಭಾಗವಾಗಿದ್ದೇವೆ – **"ಕ್ರಿಸ್ತನ ದೇಹದ ಅಂಗಗಳು"**, ಆದಕಾರಣ ರೊಟ್ಟಿಯನ್ನು ನಮ್ಮ ಪರವಾದ ಆತನ ಸಮರ್ಪಣೆ ಎಂದು ಪರಿಗಣಿಸಿದ ನಂತರ ಅದರ ಮುರಿಯೋಣವು ಇಡೀ ಸಭೆಯ, ಆತನೊಂದಿಗೆ ಮರಣದಲ್ಲಿ ಪ್ರತಿಷ್ಟೆಹೊಂದಿದವರ ಮುರಿಯೋಣವಾಗಿರುವುದರಿಂದ ಅವರೆಲ್ಲರೂ ಆತನ ಬಾಧೆಗಳಲ್ಲಿ ಪಾಲುಗಾರರಾಗಿದ್ದಾರೆ.

'ಅನ್ಯೂನ್ಯ" [Communion – Common Union] ಎಂಬ ಪದದ ಸರಿಯಾದ ಅರ್ಥ. 'ಹುದುವಾಗಿ ಭಾಗವಹಿಸುವುದು'. ಆದ ಕಾರಣ ಇದರ ಪ್ರತಿಯೊಂದು ವಾರ್ಷಿಕ ಆಚರಣೆಯಲ್ಲಿಯೂ ನಾವು ನಮ್ಮ ಪಾಪಗಳ ನಿವಾರಣಾರ್ಥ ಮಾಡಿದ ನಮ್ಮ ವಿಮೋಚಕನ ತ್ಯಾಗದ ಮೇಲೆ ಇಟ್ಟಿರುವ ನಮ್ಮ ಎಲ್ಲಾ ನಿರೀಕ್ಷೆಗಳ ತಳಪಾಯವನ್ನು ಗ್ರಹಿಸುವುದು ಮಾತ್ರವಲ್ಲ, ನಾವು *" ನಾವು ಆತನೊಂದಿಗೆ ಜೀವಿಸುವುದಕ್ಕಾಗಿ, ಆತನೊಂದಿಗೆ ಮರಣವನ್ನೂ ಹೊಂದುತ್ತೇವೆ" " ಆತನೊಂದಿಗೆ ಆಳುವುದಕ್ಕಾಗಿ ಆತನೊಂದಿಗೆ ಬಾಧೆಗಳನ್ನೂ ಸಹಾ ಅನುಭವಿಸುತ್ತೇವೆ"* ಎಂಬ ನಮ್ಮ ಸ್ವಂತ ಪ್ರತಿಷ್ಟೆಯನ್ನು ಪುನರುಜ್ಜೀವಿತಗೊಳಿಸಿ ಕೊಳ್ಳುತ್ತೇವೆ ಮತ್ತು ನವೀಕರಿಸಿಕೊಳ್ಳುತ್ತೇವೆ. ದೇವರಿಂದ ನೇಮಿಸಲ್ಪಟ್ಟ ಈ ಆಚರಣೆಯು ಎಷ್ಟೊಂದು ಭವ್ಯವಾದ ರೀತಿಯಲ್ಲಿ ವ್ಯಾಪಕವಾಗಿದೆ! ನಾವು

ನೈಜವಾದವುಗಳ ಬದಲಾಗಿ ಸಂಕೇತಗಳನ್ನು ಹಾಕುವುದಿಲ್ಲ ; ನಮ್ಮ ಕರ್ತನ ಉದ್ದೇಶಗಳಿಗೆ ಮೀರಿದಂತೆ ಯಾವುದೂ ಇಲ್ಲ ಮತ್ತು ನಮ್ಮ ಪಾಲಿನ ಔಚಿತ್ಯತೆಗೆ ಮೀರಿದವುಗಳೂ ಇಲ್ಲ. ಆತನೊಂದಿಗೆ ಹೃದಯ ಸಂಗಮ, ಆತನ ಮೇಲೆ ಹೃದಯ ಪೋಷಣೆ, ಆತನ ದೇಹದ ಅಂಗಗಳೊಂದಿಗೆ (ಜೊತೆ ಸದಸ್ಯರೊಂದಿಗೆ) ಹೃದಯ ಸಂಗಮ ಮತ್ತು ತ್ಯಾಗದ ಒಡಂಬಡಿಕೆ ಅರ್ಥದ ಬಗ್ಗೆ ಹೃದಯ ಪೂರ್ವಕವಾದ ಗ್ರಹಿಕೆ ಇವುಗಳು ನಿಜವಾದ ಅನ್ಯೂನತೆ [Communion] ಯಾಗಿದೆ. ನಾವು ಇದಕ್ಕೆ ಪ್ರಾಮಾಣಿಕರಾದಲ್ಲಿ , ವರ್ಷವೆಲ್ಲಾ ದಿನದಿಂದ ದಿನಕ್ಕೆ ಕರ್ತನೊಂದಿಗೆ ನಾವು ಸಹಾ ಮುರಿಯಲ್ಪಡುತ್ತೇವೆ ಮತ್ತು ನಿರಂತರವಾಗಿ ಆತನ ಅರ್ಹತೆಯ ಮೇರೆಗೆ ಉಣ್ಣುತ್ತೇವೆ, ಕರ್ತನಲ್ಲಿ ಮತ್ತು ಆತನ ಬಲದ ಶಕ್ತಿಯಲ್ಲಿ ಬಲಗೊಂಡು ಬೆಳೆಯುತ್ತೇವೆ. ಈ ಸ್ಮಾರಕದ ಆಚರಣೆಯಿಂದ ಅದೆಂಥಾಃ ಆಶೀರ್ವಾಧವು ನಮಗೆ ಲಭಿಸಲಿದೆ! ಆತನ ಕೃಪೆ ಮತ್ತು ಜ್ಞಾನದ ಮುಂದುವರೆದ ಮೆಚ್ಚುಗೆ ಮತ್ತು ಬೆಳವಣಿಗೆಯಲ್ಲಿ, ಹಾಗೂ ನಾವು ಕರೆಯಲ್ಪಟ್ಟಿರುವ ಸೇವೆಯ ಭಾಗವಹಿಸುವಿಕೆಯ ಮುಂದುವರಿಕೆಯಲ್ಲಿ ಇಂದು ಮಾತ್ರವಲ್ಲ ಮುಂಬರುವ ದಿನ ಗಳಲ್ಲಿಯೂ ಮನದ ಎಂಥಾಃ ಕುದಿಯುವಿಕೆ!

ನಾವು ಕರ್ತನನ್ನು ಸ್ತೋತ್ರಮಾಡುವ ಪಾತ್ರೆಯ ಬಗ್ಗೆಯೂ ಅಪೋಸ್ತಲನು ಅಂತರ್ಗತ ಗೊಳಿಸುತ್ತಿದ್ದಾನೆಂಬುದನ್ನು ನಾವಿಲ್ಲಿ ಗಮನಿಸಬೇಕು. “ ಇದು ಕರ್ತನ ರಕ್ತದ ಅನ್ಯೂನತೆ ಅಲ್ಲವೇ?” ನಿಜವಾಗಿ ಸಮರ್ಪಿಸಿಕೊಂಡವರು, ಈ ಸುವಾರ್ತಾ ಯುಗದಲ್ಲೆಲ್ಲಾ ನೂತನ ಸೃಷ್ಟಿಯ ನಿಷ್ಟಾವಂತ ‘ಚಿಕ್ಕ ಹಿಂಡು’, ದೇಹದಲ್ಲಿ ಕ್ರಿಸ್ತನಾಗಿದ್ದಾನೆ ಎಂಬುದು ಹೋ! ಎಂಥಾಃ ಆಲೋಚನೆ! ನಮ್ಮ ಕರ್ತನು ತನ್ನ ದೇಹದ ಅಂಗಗಳನ್ನಾಗಿ ಅಂಗೀಕರಿಸಿಕೊಂಡ ಇವರುಗಳ ಶ್ರಮೆ, ಶೋಧನೆಗಳು, ಕಳಂಕ ಮತ್ತು ಮರಣ ಇವುಗಳು ಆತನ ತ್ಯಾಗದ ಭಾಗವಾಗಿ ಪರಿಗಣಿಸಲ್ಪಡುತ್ತವೆ ಮತ್ತು ಇವರುಗಳು ಇದರ ಶಿರವೂ ಮಹಾ ಯಾಜಕನೂ ಆದಾತನ ಸಹವಾಸದಲ್ಲಿ ಇರುವವರಾಗಿದ್ದಾರೆ. ಈ ಪರಿಸ್ಥಿಯನ್ನು ಅರ್ಥಮಾಡಿಕೊಂಡು, ಸಭೆಯ ಸದಸತ್ಯಕ್ಕೆ ಮತ್ತು ಅದರ ಪರಿಣಾಮವಾಗಿ ಇಂದು ಮರಣದ ಪರ್ಯಂತರ ತ್ಯಾಗವನ್ನರ್ಪಿಸಲು ಮತ್ತು ಭವಿಷ್ಯದಲ್ಲಿ ಆತನ ಭವ್ಯವಾದ ಕಾರ್ಯದಲ್ಲಿ ಭಾಗವಹಿಸುವಂತೆ ಕರ್ತನ ಆಹ್ವಾನವನ್ನು ಮೆಚ್ಚಿಕೊಂಡು ತಾವು ಕ್ರಿಸ್ತನ ನಾಮಕ್ಕಾಗಿ ಬಾಧೆಯನ್ನನುಭವಿಸಲು ಅರ್ಹರು ಮತ್ತು ಸತ್ಯದ ಸೇವೆಯಲ್ಲಿ ಆತನ ಮಾಂಸ ಮತ್ತು ಮೂಳೆಯ ಸದಸ್ಯರು ಎಂದು ಎಣಿಸಿಕೊಳ್ಳುವುದರಲ್ಲಿ ಸಂತೋಷಿಸಲಾರದವರು ಯಾರು? ಲೋಕವು ಕ್ರಿಸ್ತನನ್ನು ತಿಳಿದುಕೊಳ್ಳಲ್ಲಿಲ್ಲವಾದ ಕಾರಣ ಇವರನ್ನು ತಿಳಿದುಕೊಳ್ಳದೇ ಹೋದರೆ ಏನಾಗುತ್ತದೆ? (೧ ಯೋಹಾನ ೩:೧ ನೋಡಿರಿ). ಇವರುಗಳು ಕ್ರಿಸ್ತನ ದೇಹದ ಅಂಗಗಳಾಗಲು ಮತ್ತು ವಿಮೋಚಕನ ಭವಿಷ್ಯದ ಮಹಿಮೆಯಲ್ಲಿ ಪಾಲುಗಾರರಾಗಲು ಈ ಲೋಕದ ಆಯ್ದ ಆಶೀರ್ವಾದಗಳನ್ನೂ, ಸವಲತ್ತುಗಳನ್ನೂ ಕಳಕೊಂಡರೂ ಅವರಿಗೆ ಏನಾಗುತ್ತದೆ?

ಇವರುಗಳು ಕೃಪೆಯಲ್ಲಿಯೂ, ಜ್ಞಾನದಲ್ಲಿಯೂ, ಉತ್ಸಾಹದಲ್ಲಿಯೂ ಬೆಳೆಯುವಾಗ ಅವರಲ್ಲಿ ಪ್ರತಿಯೊಬ್ಬರೂ ಅಪೋಸ್ತಲನ ದೃಷ್ಟಿಯಲ್ಲಿ ನಿರ್ಣಯಿಸಿಕೊಳ್ಳುವವರಾಗ ಬೇಕು. ಅದೇನೆಂದರೆ, ಆತನು ಈ ಲೋಕದ ಅನುಗ್ರಹ ಮತ್ತು ಸವಲತ್ತುಗಳ ಬಗ್ಗೆ ***“ ನಾನು ಎಲ್ಲವನ್ನೂ ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತವಾಗಿ ನಾನು ಎಲ್ಲವನ್ನು ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ”*** (ಫಿಲಿಪ್ಪ ೦೩:೦೮ ಮತ್ತು ರೋಮ ೦೮ ; ೧೮ನ್ನೂ ನೋಡಿರಿ) ಎಂದಿದ್ದಾನೆ.

ಮತ್ತೊಂದು ಅಲೋಚನೆಯೆಂದರೆ ಪರಸ್ಪರ ಪ್ರೀತಿ, ಸಹಾನುಭೂತಿ ಮತ್ತು ಆಸಕ್ತಿ. ಇವುಗಳು ಈ ಕರ್ತನ ಒಂದೇ ದೇಹದ ಅಂಗಗಳಲ್ಲಿ ಪ್ರಬಲವಾಗಿರಬೇಕು. ಕರ್ತನ ಆತ್ಮನು ನಮ್ಮ ಹೃದಯಗಳಲ್ಲಿ ಆಳಲು ಹೆಚ್ಚು ಹೆಚ್ಚಾಗಿ ಬರುವಾಗ ಅದು ನಮಗೆ ಎಲ್ಲಾ ಸಂದರ್ಭಗಳಲ್ಲಿಯೂ ಮತ್ತು ಅವಕಾಶವಿರುವಾಗಲೆಲ್ಲಾ ಎಲ್ಲರಿಗೂ ವಿಶೇಷವಾಗಿ ವಿಶ್ವಾಸಿಗಳ ಮನೆಯವರಿಗೆ ಒಳ್ಳೆಯದನ್ನು ಮಾಡುವುದರಲ್ಲಿ ಸಂತೋಷಿಸುವಂತೆ ಮಾಡುತ್ತದೆ. ನಮ್ಮ ಸಹಾನುಭೂತಿಯು ಬೆಳೆದು ಇಡೀ ಲೋಕದ ಮಾನವಕುಲವನ್ನು ತಲಪುವಾಗ ಅವರು ವಿಶೇಷವಾಗಿ ಕರ್ತನ ಕಡೆಗೆ ಬೆಳೆಯಬೇಕು ಮತ್ತು ಇದರ ಪರಿಣಾಮವಾಗಿ ಆತನು ಮಾನ್ಯಮಾಡುವ, ಆತನ ಅತ್ಮವಿರುವವರ, ಮತ್ತು ಆತನ ಹೆಜ್ಜೆಜಾಡಿನಲ್ಲಿ ನಡೆಯಲು ಬಯಸುವವರ ಕಡೆಗೆ ಅದು ವಿಸ್ತರಿಸಬೇಕು. ಕರ್ತನ ಕಡೆಗಿರುವ ನಮ್ಮ ಪ್ರೀತಿಯನ್ನು ನಾವು ನಮ್ಮ ಸಹೋದರ ಬಗ್ಗೆ ಅಂದರೆ ಆತನ ದೇಹದ ಸಹ ಸದಸ್ಯರೆಡೆಗೆ ಇಟ್ಟಿರುವ ಪ್ರೀತಿಯ ನೆಲೆಯಲ್ಲಿ ಅಳಿಯಲಾಗುವುದೆಂದು ಅಪೋಸ್ತಲನು ಸೂಚಿಸುತ್ತಾನೆ. ನಮ್ಮ ಪ್ರೀತಿಯು ಎಲ್ಲವನ್ನು ಸಹಿಸಿಕೊಳ್ಳುವುದೂ, ಇತರರ ಬಗ್ಗೆ ಎಲ್ಲದರಲ್ಲಿಯೂ ತಾಳ್ಮೆಯಿಂದಿರುವುದೂ ಆದಲ್ಲಿ ಇದೇ ದೇಹದ ಸಹ ಅಂಗಗಳಾದ ಇವರುಗಳೊಡನೆ ಅದರ ಶಿರವಾದ ಕರ್ತನ ಮೂಲಕ ನಾವುಗಳು ಜೋಡಿಸಲ್ಪಟ್ಟಿರುವುದು ಎಷ್ಟೋ ಸತ್ಯವಾದುದಲ್ಲವೆ?. ***"ನಾವಂತೂ ಕ್ರಿಸ್ತ ಸಹೋದರರನ್ನು ಪ್ರೀತಿಸುವವರಾಗಿರುವುದರಿಂದ ಮರಣದಿಂದ ಪಾರಾಗಿ ಜೀವದಲ್ಲಿ ಸೇರಿದವರಾಗಿದ್ದೇವೆ'*** (೧ ಯೋಹಾನ ೦೩:೧೪) ಎಂಬ ಅಪೋಸ್ತಲನಾದ ಯೋಹಾನನ ಮಾತುಗಳಿಗಾಗಿ ನಾವು ಆಶ್ಚರ್ಯ ಪಡಬೇಕಾದ್ದಿಲ್ಲ. ಕ್ರಿಸ್ತನ ವೇದನೆಗಳ ಮಟ್ಟವನ್ನು ನಾವು ತುಂಬಿಸುವ ಬಗ್ಗೆ ಆಲೋಚಿಸುವಾಗ ನಮಗೆ ಅಪೋಸ್ತಲನಾದ ಪೌಲನು " ***ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದಿದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ*** " (ಕೊಲೊಸ್ಸೆ –೧:೨೪) ಎಂಬ ಮಾತುಗಳು ನೆನಪಿಗೆ ಬರುತ್ತವೆ.

---

ಇಂತಹುದೇ ಭಾವನೆಯು " ***ನಾವು ಸಹಾ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ'*** (೧ ಯೋಹಾನ ೦೩:೧೬) ಎಂಬ ಮಾತುಗಳಲ್ಲಿಯೂ ವ್ಯಕ್ತವಾಗುತ್ತದೆ. ಈ ರೀತಿಯಲ್ಲಿ ಅದೆಂಥಾಃ ಬಾತೃತ್ವವು ಧ್ವನಿತವಾಗುತ್ತದೆ! ಸಹೋದರರ ಸಲುವಾಗಿ ತಮ್ಮ ಪ್ರಾಣವನ್ನೇ ನೀಡಲು ಸಿದ್ಧವಾಗುವ ಪ್ರೀತಿಯನ್ನು ನಾವು ಬೇರೆಲ್ಲಿ ಕಾಣಲು ನಿರೀಕ್ಷಿಸಬಹುದು?. ನಾವಿಲ್ಲಿ "ಕರ್ತನ ಕುರಿ"ಯಲ್ಲಿ ಕರ್ತನು ಸಭೆಯ ಯಜ್ಞವನ್ನು ಪ್ರಾಯಶ್ಚಿತ್ತ ದಿನದ ಯಜ್ಞವನ್ನಾಗಿದೆ [see Tabernacle Shadows of better sacrifices p 59] ಎಂಬುದಾಗಿ ಆರೋಪಿಸುವುದಿಲ್ಲ. ಇದುವರೆಗೆ ಅಪೋಸ್ತಲನೊಂದಿಗೆ ನಾವು ಕೇವಲ ಯಜ್ಞ ಅಂದರೆ ಪ್ರಾಣವನ್ನು ಅರ್ಪಿಸುವುದು, ಇದನ್ನು ಮುಖ್ಯವಾಗಿ ಸಹೋದರರಿಗಾಗಿ ಅವರ ಸೇವೆಗಾಗಿ ಮಾಡಬೇಕಾಗಿದೆ ಎಂಬುದರ ಕುರಿತಾಗಿ ಚಿಂತಿಸುತ್ತಿದ್ದೆವು ; ಲೋಕಕ್ಕಾಗಿ ಮಾಡುವ ಸೇವೆಯು ಮುಖ್ಯವಾಗಿ ಬರಲಿರುವ ಸಹಸ್ರಮಾನಕ್ಕೆ ಸಂಬಂಧಿಸಿದ್ದಾಗಿದೆ. ಪ್ರಸ್ತುತ ಸ್ಥಿತಿಯಲ್ಲಿ ನಮ್ಮ ಸಮಯ, ಮೇಧಾಶಕ್ತಿ, ಪ್ರಭಾವಗಳು ಮತ್ತು ಸಂಪಾದನೆಗಳು ಹೆಚ್ಚುಕಡಿಮೆ ಇತರರಿಗೆ ಅಂದರೆ ಹೆಂಡತಿ, ಮಕ್ಕಳು, ವೃದ್ಧ ತಂದೆತಾಯಿಗಳು ಮತ್ತಿತ್ತರ ಅವಲಂಬಿಗಳು ಇವರುಗಳಿಗೆ ಮುಡುಪಾಗಿ

ಇಡಲಾಗಿದೆ. ಮತ್ತು ನಾವು " ಅವಶ್ಯಕವಾದ ವಸ್ತುಗಳು", 'ಸಭ್ಯವಾದುದು' ಎಲ್ಲರ ದೃಷ್ಟಿಯಲ್ಲಿ ಪ್ರಾಮಾಣಿಕವಾದುದು" ಎಂಬ ಹಂಚಿಕೆಗಳಿಗೆ ನಮ್ಮನ್ನು ಬದ್ಧರನ್ನಾಗಿ ಮಾಡಿಕೊಂಡಿದ್ದೇವೆ. ಆದುದರಿಂದ ತುಲನಾತ್ಮಕವಾಗಿ ಸಮರ್ಪಿಸಲು ನಮ್ಮ ಪಾಲಿಗೆ ಅಲ್ಪವಾಗಿ ಮಾತ್ರವೇ ಲಭ್ಯವಿದೆ, ಸಹೋದರರುಗಳಿಗಾಗಿ ಅರ್ಪಿಸಲು ನಮ್ಮ ಬಳಿ ಸ್ವಲ್ಪ ಮಾತ್ರವೇ ಉಳಿದಿದೆ ಎಂದು ಕಂಡುಕೊಳ್ಳುತ್ತೇವೆ. ಈ ಪ್ರಪಂಚ, ದೇಹ ಮತ್ತು ಕೆಡುಕನು ನಿರಂತರವಾಗಿ ನಮ್ಮಿಂದ ಕೇಳಲು ಮತ್ತು ನಾವು ಯಾವುದಕ್ಕೆ ನಮ್ಮನ್ನು ಪ್ರತಿಷ್ಠಿಸಿ ಕೊಂಡಿದ್ದೇವೋ ಅವುಗಳಿಂದ ಬೇರೆಡೆಗೆ ನಮ್ಮನ್ನು ಸೆಳೆಯಲು ಪ್ರಯತ್ನಿಸುತ್ತಿರುತ್ತಾರೆ. ಕೆಡುಕನು ಮೇಲುಗೈ ಸಾಧಿಸುತ್ತಿರುವ ಈ ಸಮಯದಲ್ಲಿ ಕರ್ತನ ಆಯ್ಕೆಯೆಂದರೆ ಸುತ್ತಲ ಪರಿಸ್ಥಿತಿಯು ಆತನ ಮತ್ತು ಆತನವುಗಳ ಬಗ್ಗೆ ಪ್ರೀತಿ ಮತ್ತು ನಿಷ್ಠೆಯನ್ನು ರುಜುತುವಾತು ಪಡಿಸುವುದು. ನಮ್ಮ ಪ್ರೀತಿಯು ತಣ್ಣಗಿರುವುದಾದಲ್ಲಿ ಈ ಲೋಕದ, ದೇಹದ ಮತ್ತು ಕೆಡುಕನ ಕೇಳಿಕೆಗಳು ನಮಗೆ ಅತಿಯಾಗಿ ಕಂಡು ಬರುತ್ತವೆ ಮತ್ತು ಅವುಗಳು ನಮ್ಮ ಸಮಯ, ನಮ್ಮ ಪ್ರಭಾವ ಮತ್ತು ಹಣವನ್ನು ಆಕರ್ಷಿಸುತ್ತವೆ. ಮತ್ತೊಂದೆಡೆಯಲ್ಲಿ, ಕರ್ತನ ಬಗ್ಗೆ ಇರುವ ನಮ್ಮ ಪ್ರೀತಿ ಮತ್ತು ನಿಷ್ಠೆಯು ಬಲವಾಗಿರುವ ಅನುಪಾತದಲ್ಲಿಯೇ ನಾವು ಅವುಗಳನ್ನು ಆತನಿಗಾಗಿ ಸಮರ್ಪಿಸಲು ಸಂತೋಷಿಸುತ್ತೇವೆ, ನಮ್ಮ ಹೆಚ್ಚುವರಿ ಚೈತನ್ಯ, ಪ್ರಭಾವ ಮತ್ತು ಸಂಪತ್ತನ್ನು ಅವಕಾಶ ದೊರೆತಾಗಲೆಲ್ಲಾ ಸಹೋದರರ ಸೇವೆಯಲ್ಲಿ ಅರ್ಪಿಸುವುದು ಮಾತ್ರವಲ್ಲ , ಇದಕ್ಕೂ ಹೆಚ್ಚಾಗಿ ಕರ್ತನ ಬಗ್ಗೆ ನಮ್ಮ ಶ್ರದ್ಧೆಯು ವಿವೇಚನಾತ್ಮಕವಾಗಿ ನಮ್ಮ ಮನೆ ಮತ್ತು ಕುಟುಂಬದ ಮುಖ್ಯವಾಗಿ ಸ್ವಂತದ ಆರ್ಥಿಕ ಇತಿಮಿತಿಗನುಸಾರವಾಗಿ ಕಡಿತಗೊಳಿಸಿ ನಾವು ಕರ್ತನ ಬಲಿಪೀಠದ ಮುಂದೆ ಹೆಚ್ಚು ಹೆಚ್ಚು ಅರ್ಪಿಸಲು ಶಕ್ತರಾಗುವಂತೆ ನಮ್ಮನ್ನು ಚುರುಕಾಗಿಸುತ್ತದೆ. ನಮ್ಮ ಕರ್ತನು ಸುಮಾರು ಮೂರುವರೆ ವರ್ಷಗಳ ಕಾಲ ತನ್ನ ದೇಹವನ್ನು ಮುರಿಯತ್ತಲಿದ್ದು , ತನ್ನ ರಕ್ತವನ್ನು ಚೆಲ್ಲಿ, ತನ್ನ ಜೀವವನ್ನೇ ಸಮರ್ಪಿಸಿ ಈ ಯಜ್ಞವನ್ನು ಕಲ್ವಾರಿಯಲ್ಲಿ ನೆರವೇರಿಸಿದನು. ಅದರಂತೆ ನಾವೂ ಸಹಾ ನಮ್ಮನ್ನು ಸಹೋದರರುಗಳಿಗಾಗಿ ಸಣ್ಣಪುಟ್ಟ ಐಹಿಕ ಅಥವಾ ಆತ್ಮೀಕ ಸೇವಾಸಂಗತಿ ಇವುಗಳೆರಡಲ್ಲಿಯೂ ಅರ್ಪಿಸಿಕೊಳ್ಳಬೇಕಾಗುತ್ತದೆ. ಆತ್ಮಿಕವು ಹೆಚ್ಚು ಶ್ರೇಷ್ಟವಾಗಿ ರುವುದರಿಂದ ಅದು ಪ್ರಾಮುಖ್ಯವಾಗಿದ್ದು ಐಹಿಕ ಸಂಗತಿಗಳ ಅಗತ್ಯವಿರುವ ತನ್ನ ಸಹೋದರನ ಬಗ್ಗೆ ಕನಿಕರ ತೋರದೆ ಸುಮ್ಮನಿರುವವನು ಆತನ ಹೃದಯದಲ್ಲಿ ಕರ್ತನ ಆತ್ಮನು ಸರಿಯಾದ ಪ್ರಮಾಣದಲ್ಲಿ ಆಳುತ್ತಿಲ್ಲವೆಂಬುದಕ್ಕೆ ನಿದರ್ಶನವಾಗಿದ್ದಾನೆ.

## *ಈ ಸ್ಮಾರಕವು ಇನ್ನೂ ಉಚಿತವಾಗಿದೆ*

ಮೂಲದಲ್ಲಿ ನಮ್ಮ ಕರ್ತನ ಮರಣದ ಸ್ಮರಣಾಚರಣೆಯು (ಆತನ ತ್ಯಾಗದಲ್ಲಿ ನಮ್ಮ ಭಾಗವಹಿಸುವಿಕೆಯು ಅಡಕವಾಗಿರುವಂತೆ ಅಪೋಸ್ತಲನ ಮೂಲಕವಾಗಿ ಇದಕ್ಕೆ ಪವಿತ್ರಾತ್ಮನಿಂದ ಹೆಚ್ಚಾದ ಅರ್ಥವು ಹೊಂದಿಕೊಂಡಿದ್ದು) ನಾವು ಕಂಡುಕೊಂಡಂತೆ, ಯೆಹೂದಿ ಪ್ರಥಮ ತಿಂಗಳ ಹದಿನಾಲ್ಕನೆಯ ತಾರೀಖು ಎಂಬ ನಿರ್ಧಿಷ್ಟ ದಿನಾಂಕದಂದು ಆಗಿತ್ತು. ಈ ದಿನವನ್ನು ಅದೇ ರೀತಿಯಲ್ಲಿ ಲೆಕ್ಕಾಚಾರ ಮಾಡಲಾಗುವುದು ಇನ್ನೂ ಯುಕ್ತವಾಗಿದೆ ಮತ್ತು 'ಹಳೆಯ ಮಾರ್ಗ"ದ ಬಗ್ಗೆ ವಿಚಾರಿಸುವವರಿಗೆ ಮತ್ತು ಅದರಲ್ಲಿಯೇ ನಡೆಯ ಬಯಸುವವರಿಗೆ ಇದು ಅನ್ವಯವಾಗುತ್ತದೆ. ನಮ್ಮ ಕರ್ತನೇ

ನೇಮಿಸಿದಂತೆ ಆತನ ಮರಣ ಮುಂತಾದವುಗಳ ಆದಿಸಭೆಯವರ ಈ ವಾರ್ಷಿಕ ಆಚರಣೆಯು** ಪ್ರಸ್ತುತ ಸತ್ಯದ ಮೂಲಕವಾಗಿ ಬೆಳಕಿನೆಡೆಗೆ ಬರುವವರಿಂದ ಪುನರುಜ್ಜೀವಿತಗೊಂಡಿದೆ.

ಕರ್ತನ ಸಾಂಕೇತಿಕ ರಾತ್ರಿಭೋಜನದ ನಿಜವಾದ ಅರ್ಥವು ಹೆಚ್ಚು ಹೆಚ್ಚಾಗಿ ಕಳೆದುಹೋಗುತ್ತಿರುವುದರ ಬಗ್ಗೆ ಆಶ್ಚರ್ಯಪಡಬೇಕಾದ್ದಿಲ್ಲ. ಇದರ ವಾರ್ಷಿಕ ಆಚರಣೆಗೆ ಹೊಂದಿಕೊಂಡಿದ್ದಂಥಾಃ ಉಚಿತ ಮರ್ಯಾದೆಯನ್ನು ಸಹಾ ನಿರ್ಲಕ್ಷಿಸಲಾಗಿದೆ. ನಾವು ಈ ಪ್ರಸ್ತಾಪದ ಕೆಳಗಣ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವಾಗ ಇದು ಹೆಚ್ಚು ಸರಳವಾದ ವ್ಯಾಪಕತೆಯನ್ನು ಹೊಂದಿಕೊಳ್ಳುತ್ತದೆ :-

ಅಪೋಸ್ತಲನೂ ಆತನ ಹತ್ತಿರದ ಉತ್ತರಾಧಿಕಾರಿಗಳು ಚಿರನಿದ್ರೆಯನ್ನು ಹೊಂದಿದ ಮೇಲೆ – ಸುಮಾರು ಮೂರನೆಯ ಶತಮಾನದಲ್ಲಿ ರೋಮನ್ ಕಾಥೋಲಿಸಂ ಸಭೆಯಲ್ಲಿ ಪ್ರವರ್ಧಮಾನವಾಗಿತ್ತು. ಅವರ ಒಂದು ತಪ್ಪಾದ ಸಿದ್ಧಾಂತವೆಂದರೆ, ಕ್ರಿಸ್ತನ ಮರಣವು ಹಿಂದಿನ ಪಾಪಗಳನ್ನು ನಿವಾರಿಸುವಾಗ ವಿಶ್ವಾಸಿಯು ದೀಕ್ಷಾಸ್ನಾನದ ಮೂಲಕ ಕ್ರಿಸ್ತನ ಸಹವಾಸಕ್ಕೆ ಬಂದ ಮೇಲೆ ಅದು ವೈಯುಕ್ತಪಾಪಗಳನ್ನು ಚಿಗುರೊಡಿಸುವುದಿಲ್ಲ, ಆದರೆ ಅಂಥಾಃ ಪಾಪಗಳಿಗಾಗಿ ಒಂದು ನೂತನ ಬಲಿಯ ಅಗತ್ಯವಿದೆ ಎಂಬುದು. ಈ ತಪ್ಪಿನ ಆಧಾರದ ಮೇಲೆ 'ಮಾಸ್' ಸಿದ್ಧಾಂತವು ಕಟ್ಟಲ್ಪಟ್ಟಿತು. ಇದನ್ನು ನಾವು ಈ ಮೊದಲು ಸ್ವಲ್ಪವಾಗಿ ವಿವರಿಸಿದಂತೆ ಯಾರಿಗಾಗಿ ಈ 'ಮಾಸ್' ಆಚರಿಸಲಾಗುತ್ತದೆಯೋ ಅಥವಾ ಸಮರ್ಪಿಸಲಾಗುತ್ತದೆಯೋ ಅವರ ಒಂದು ನಿರ್ಧಿಷ್ಟವಾದ ಪಾಪಕ್ಕೆ ಕ್ರಿಸ್ತನ ಹೊಸ ತ್ಯಾಗವೆಂದು ಪರಿಗಣಿಸಲಾಗುತ್ತದೆ – ಕ್ರಿಸ್ತನ ಈ ನೂತನ ತ್ಯಾಗವು ಇದನ್ನು ನೆರವೇರಿಸುವ ಪುರೋಹಿತನಿಗೆ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಕ್ರಿಸ್ತನ ನಿಜವಾದ ದೇಹ ಮತ್ತು ರಕ್ತವನ್ನಾಗಿ ಪರಿವರ್ತಿಸುವ ಮಾಂತ್ರಿಕ ಶಕ್ತಿಯನ್ನು ಉಂಟೆಂದು ಹೇಳಿಕೊಳ್ಳುವುದು ಸಮಂಜಸವೆಂದು ಕಾಣುವಂತೆ ನೆರವೇರಿಸಲಾಗುತ್ತದೆ. ನಂತರದಲ್ಲಿ ಈ ಸಂಸ್ಕಾರವನ್ನು ಯಾರಿಗಾಗಿ ನೆರವೇರಿಸಲಾಗುತ್ತಿದೆಯೋ ಅ ವ್ಯಕ್ತಿಯ ಪಾಪ ನಿವಾರಣೆಯ ನಿಮಿತ್ತ ಕರ್ತನನ್ನು ಹೊಸದಾಗಿ ಸಮರ್ಪಣೆ ಮಾಡುವುದಕ್ಕಾಗಿ 'ವೇಫರ್'ಮುರಿಯಲಾಗುವುದು.

---

***** ಇಬ್ರಿಯ ವರ್ಷವು ವಸಂತ ಋತುವಿನ ಸೂರ್ಯ ಸಮಭಾಜಕ ರೇಖಾ ಕಾಲದ ನಂತರ ಕಾಣಿಸಿಕೊಳ್ಳುವ ಚಂದ್ರದರ್ಶನದೊಂದಿಗೆ ಪ್ರಾರಂಭವಾಗುತ್ತದೆ. ಇದರಿಂದ ಹದಿನಾಲ್ಕನೆಯ ದಿನವನ್ನು ಸುಲಭವಾಗಿ ಲೆಕ್ಕ ಮಾಡಬಹುದು.ಇದನ್ನು ಹದಿನೈದನೆ ದಿನ ಪ್ರಾರಂಭಗೊಂಡು ಒಂದುವಾರದ ವರೆಗೆ ಮುಂದುವರೆಯುವ ಹಬ್ಬದೊಂದಿಗೆ ಕಲಸಬಾರದು – ಈ ಹಬ್ಬವು ಯೆಹೂದ್ಯರ ಆಚರಣೆಯಾಗಿದ್ದು ಆ ವಾರವು ಹುಳಿಯಿಲ್ಲದ ರೊಟ್ಟಿಯ ವಾರವಾಗಿದ್ದು ಇದನ್ನು ಸಂಭ್ರಮದೊಡನೆ ಆಚರಿಸಲಾಗುವುದು. ಇದು ಸಂಪೂರ್ಣವಾಗಿ ಕ್ರೈಸ್ತ ನ ಭವಿಷ್ಯಕ್ಕೆ ಮತ್ತು ಆತನ ಮುಂದಿನ ಸ್ಮಾರಕ ರಾತ್ರಿಭೋಜನದ ವರೆಗಿನ ವರ್ಷಕ್ಕೆ ಅನುಗುಣವಾಗಿದೆ. ಯೆಹೂದ್ಯನ ಕುರಿ ಬಲಿಯು ಅಂತ್ಯವನ್ನು ಸೂಚಿಸುವುದಾಗಿದ್ದು ಒಂದು ವಾರ ಕಾಲದ ಆಚರಣೆಯ ಪ್ರಾರಂಭವಾಗಿದೆ. ಅದಕ್ಕೆ ಆತನ ಒಂದು ವೀಶೇಷವಾದ ಗಮನವಿದೆ. ನಮ್ಮ ಸ್ಮಾರಕವು ಸಹಾ ಒಂದಿ ಕುರಿ ಬಲಿಗೆ ಸಂಬಂಧಿಸಿದ್ದು ನಿಶಾನ್(ಮೊದಲನೆಯ) ತಿಂಗಳ ಅಳನೇ ದಿನಕ್ಕೆ ಸೇರಿದೆ. ಇದಕ್ಕೂ ಹೆಚ್ಚಾಗಿ ನಾವು ದಿನದ ಘಂಟೆಯನ್ನು ಲೆಖ್ಖಮಾಡುವ ಪದ್ಧತಿಯು ಬದಲಾಗಿದ್ದು ನಿಸಾನ್ ತಿಂಗಳ ಹದಿನಾಲ್ಕನೆಯ ತಾರೀಕು ನಾವೀಗ ಕರೆಯುವ ಹದಿಮೂರರ ಸಾಯಂಕಾಲವಾಗುತ್ತದೆ..***

ಈ ರೀತಿಯ ಬೋಧನೆ ಮತ್ತು ಅಭ್ಯಾಸ ಕ್ರಮವು ದೈವಿಕ ದೃಷ್ಟಿಕೋನದಿಂದ ಕರ್ತನಿಗೆ ಅಸಹ್ಯಕಾರಿಯಾಗಿದೆ ಎಂಬುದನ್ನು ನಾವೀಗಾಗಲೇ ಹೇಳಿದ್ದೇವೆ – ***"ಅವನು ಕೂಡಿಸುವ ಸೈನ್ಯವು ಆಶ್ರಯದುರ್ಗವಾದ ಪವಿತ್ರಾಲಯವನ್ನು ಹೊಲೆಗೆಡಿಸಿ ನಿತ್ಯಹೋಮವನ್ನು ನೀಗಿಸಿ ಹಾಳುಮಾಡುವ ಅಸಹ್ಯವಸ್ತುವನ್ನು ಪ್ರತಿಷ್ಠಿಸುವುದು"*** (ದಾನಿ ೧೧:೩೧ ಮತ್ತು ೧೨:೧೧* ನೋಡಿ)

ಇಂಥಾಃ ತಪ್ಪಾದ ಸಿದ್ಧಾಂತವು ದಿಕ್ಕಿಲ್ಲದಂತೆ ಮಾಡುವುದಾಗಿದ್ದು ಇದರ ಬೆನ್ನುಹತ್ತಿ ಸಭೆಯ ಅಸಂಖ್ಯಾತ ತಪ್ಪುದೋಷಗಳಿಗೆ ಕಾರಣವಾಗಿದ್ದು ಎಲ್ಲಾ ಕ್ರಿಸ್ತವಿರೋಧಿಯ ಪ್ರಮುಖವಾದ ರೋಮನ್ ಪದ್ಧತಿಯೆಂಬ ಧರ್ಮಭ್ರಷ್ಟತೆಗೆ ಎಡೆಮಾಡಿ ಕೊಟ್ಟಿದೆ. ಹದಿನಾರನೆಯ ಶತಮಾನದವರೆಗೆ ಇಂಥಾಃ ದೃಷ್ಟಿಕೋನವು ಶತಶತಮಾನಗಳೇ ಉರುಳಿ ಹೋದರೂ ಪ್ರಭಲವಾಗುತ್ತಲೇ ಹೋಯಿತು. ನಂತರದಲ್ಲಿ ಒಂದು ಮಹಾ ಸುಧಾರಣಾ ಚಳುವಳಿಯು ವಿರೋಧದ ಅಲೆಯನ್ನು ಎಬ್ಬಿಸಿತು. ಇದು ಕಪ್ಪು ಯುಗದಲ್ಲಿ ತಪ್ಪದ ಸಿದ್ಧಾಂತಗಳ ಮತ್ತು ಕ್ರಿಸ್ತ ವಿರೋಧಿಯಾದ ತಪ್ಪಾದ ಆಚರಣೆಗಳ ದೆಸೆಯಿಂದ ಅಡಗಿ ಹೋಗಿದ್ದ ಸತ್ಯದ ಅನ್ವೇಷಣೆಯನ್ನು ಅನುತಾಪದಲ್ಲಿ ಪ್ರಾರಂಬಿಸಿತು. ಈ ಧರ್ಮಸುಧಾರಕರಿಗೆ ದೈವಿಕ ಪುರಾವೆಗಳ ಅತಿರಿಕ್ತವಾದ ಬೆಳಕು ದಯಪಾಲಿಸಲ್ಪಟ್ಟದ್ದರಿಂದ, ಈ ಬೆಳಕು ಅವರಲ್ಲಿ ಕ್ರಿಸ್ತನ ತ್ಯಾಗದ ಮೇಲೆ ಸ್ಪಷ್ಟವಾದ ಬೆಳಕನ್ನು ಚೆಲ್ಲತೊಡಗಿತು ಮತ್ತು ಪೋಪರ ಸಿದ್ಧಾಂತ ಮತ್ತು ಮಾಸ್ ಆಚರಣೆ ಇವುಗಳಲ್ಲವೂ ಖಿನ್ನತೆ ತುಂಬಿದ ಅಸಹ್ಯಕಾರಿಗಳೆಂದು ಅವರಿಗೆ ಕಾಣಲು ಪ್ರಾರಂಭವಾಯಿತು ಮತ್ತು ಅವರು ಅವನ್ನು ಅಲ್ಲಗಳೆಯ ತೊಡಗಿದರು. ೧೫೫೨ರಲ್ಲಿ ಚರ್ಚ್ ಒಫ್ಫ್ ಇಂಗ್ಲೆಂಡ್ ತನ್ನ ಪ್ರಾರ್ಥನಾ ಪುಸ್ತಕವನ್ನು ಪರಿಷ್ಕರಿಸಿ ಮಾಸ್ ಎಂಬ ಪದವನ್ನು ತೆಗೆದುಹಾಕಿತು

ಮಾಸ್ ಪದ್ಧತಿಯು ನಿಜವಾಗಿಯೂ ಕ್ರಿಯಾತ್ಮಿಕವಾಗಿ ಕರ್ತನ ವಾರ್ಷಿಕ ಸ್ಮಾರಕ ರಾತ್ರಿಭೋಜನದ ಸ್ಥಾನವನ್ನು ಆಕ್ರಮಿಸಿಕೊಂಡಿತ್ತು. ; ಯಾಕೆಂದರೆ ಮಾಸ್‌ಗಳನ್ನು ಪುನಃ ಪುನಃ ಜನರ ಪಾಪಗಳ ನಿವಾರಣಾರ್ಥ ಅಡಿಗಡಿಯ ಅಂತರದಲ್ಲಿ ಹೇಳಲಾಗುತ್ತಿತ್ತು. ಸುಧಾರಕರು ಈ ತಪ್ಪನ್ನು ಕಂಡು ಅವರು ಪ್ರಥಮ ನೇಮಕದ ಮೂಲದ ಸರಳತೆಗೆ ಹಿಂತಿರುಗಲು ಪ್ರಯತ್ನಿಸಿದರು ಮತ್ತು 'ರೋಮಿಶ್ ಮಾಸ್' ಅನ್ನು ಕರ್ತನ ಪವಿತ್ರ ಜ್ಞಾಪಕಾರ್ಥವಾದ ರಾತಿಭೋಜನದ ಉಚಿತವಾದ ಆಚರಣೆಯಲ್ಲವೆಂದು ನಿರಾಕರಿಸಿದರು. ಹೀಗಿದ್ದಾಗ್ಯೂ ಪಸ್ಕದ ನಮೂನೆಗೂ ಕರ್ತನ ಮರಣದಲ್ಲಿರುವ ಅದರ ಪ್ರತಿಸಂಕೇತಕ್ಕೂ ಮತ್ತು ರಾತ್ರಿ ಭೋಜನವು ಈ ಪ್ರತಿ ಸಂಕೇತದ ಸ್ಮಾರಕವಾಗಿರುವ ನಿಕಟ ಸಂಬಂಧವನ್ನು ಕಂಡುಕೊಳ್ಳಲಾಗದೆ ಅವರು ಅದರ ವಾರ್ಷಿಕ ಪುನರ್ಘಟನಾ ಆಚರಣೆಯ ಔಚಿತ್ಯತೆಯನ್ನು ಗ್ರಹಿಸದೇ ಹೋದರು. ಆದುದರಿಂದ, ಕೆಲವು ಪ್ರೋತೆಸ್ತಾಂತರು ಆಚರಿಸುತ್ತಾರೆ ಇದನ್ನು ಪ್ರತಿ ತಿಂಗಳೂ, ಮತ್ತೆ ಕೆಲವರು ಮೂರು ತಿಂಗಳಿಗೊಮ್ಮೆ, ಮತ್ತೆ ಕೆಲವರು ನಾಲ್ಕು ತಿಂಗಳಿಗೊಮ್ಮೆ. ಪ್ರತಿ ಪಂಗಡದವರೂ ತಮ್ಮದೇ ಆದ ನಿರ್ಣಯವನ್ನು ಮಾಡಿಕೊಂಡಿದ್ದಾರೆ. –'Disciples' ಗಳು ದೀಕ್ಷಾಸ್ನಾನದ ಬಗ್ಗೆ ಸತ್ಯವೇದವನ್ನು ತಪ್ಪಾಗಿ ಅರ್ಥೈಸಿರುವಂತೆ ಇದನ್ನೂ ತಪ್ಪಾಗಿ ಅರ್ಥೈಸಿಕೊಂಡು ಪ್ರತಿವಾರವೂ ಆಚರಿಸುತ್ತಾರೆ. ಅವರು ತಮ್ಮ ಪ್ರತಿ ವಾರದ ಈ ಆಚರಣೆಯನ್ನು ಅಪೋಸ್ತಲರ ಕೃತ್ಯ ಗಳಲ್ಲಿರುವ ಕೆಲವು ಮಾತುಗಳ ಆಧಾರದ ಮೇಲೆ ಆಚರಿಸುತ್ತಾರೆ (ಇವುಗಳಿಗಾಗಿ ಅ.ಕೃ ೨:೪೨. ೪೬ ಮತ್ತು ೨೦:೭ ಇವುಗಳನ್ನು ನೋಡಿರಿ)

---

*Vol II Chap ix and Vol III Chap iv ನೋಡಿರಿ

ನಾವೀಗಾಗಲೇ ಗಮನಿಸಿರುವಂತೆ* ಪ್ರತಿ ವಾರದ ಈ ಆಚರಣೆಗಳು ಕರ್ತನ ಮರಣದ ಸ್ಮಾರಕಾರ್ಥವಾಗಿರಲಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಅವುಗಳು ಆತನ ಪುನರುತ್ಥಾನ ಸ್ಮಾರಕಾರ್ಥವಾದ ಪ್ರೀತಿ–ಭೋಜನಗಳಗಿದ್ದವು ಮತ್ತು ಆತನ ದಿವಾರೋಹಣದ ಮೊದಲಿನ ನಾಲ್ವತ್ತು ದಿನಗಳು ಅವರು ರೊಟ್ಟಿ ಮುರಿದು ಅನುಭವಿಸುತ್ತಿದ್ದ ಸಂತೋಷದ ಆಚರಣೆಗಳಾಗಿದ್ದವು. ರೊಟ್ಟಿಮುರಿಯುವುದರಲ್ಲಿ ಅವರ ಕಣ್ಣುಗಳು ತೆರೆಯಲ್ಪಟ್ಟು ಆತನನ್ನು ಗುರುತಿಸಿದ್ದನ್ನು ಈ ಮೂಲಕ ಅವರು ನೆನಪು ಮಾಡಿಕೊಳ್ಳುವುದಕ್ಕಾಗಿ ಬಹುಶಃ ಈ ರೀತಿಯಾಗಿ ಅವರು ವಾರದ ಮೊದಲನೆಯ ದಿವಸ ಕೂಡಿಬರುತ್ತಿದ್ದರು. ನಂತರದಲ್ಲಿ ರೊಟ್ಟಿಮುರಿದು ಊಟಮಾಡಲು ನಡೆಸಿದ ಈ ಪದ್ಧತಿ ಅವರಿಗೆ ತಪ್ಪಾದುದಾಗಿರಲಿಲ್ಲ. ನಾವೀಗಾಗಲೇ ಗಮನಿಸಿದಂತೆ ದ್ರಾಕ್ಷಾರಸದ ಪಾತ್ರೆಯ ವಿಷಯದಲ್ಲಿ ಇಲ್ಲಿ ಎಲ್ಲಿಯೂ ಹೇಳಿರುವುದಿಲ್ಲ. ಆದರೆ ಕರ್ತನ ಸ್ಮಾರಕಾರ್ಥ ರಾತ್ರಿಭೋಜನದಲ್ಲಿ ಇದು ರೊಟ್ಟಿಯಷ್ಟೇ ಮುಖ್ಯವಾದುದಾಗಿದೆ.

## *ಯಾರು ಇದನ್ನು ಆಚರಿಸಬಹುದು?*

ಇದಕ್ಕೆ ನಾವು ಉತ್ತರಿಸುವುದೇನೆಂದರೆ, ಕ್ರಿಸ್ತನ ಪವಿತ್ರ ರಕ್ತವು ಪಾಪ ಸಲುವಾಗಿ ಅರ್ಪಿಸಿದ ಯಜ್ಞ ಎಂದು ನಂಬದ ಯಾರೂ ಇದರಲ್ಲಿ ಭಾಗವಹಿಸಬಾರದು. ನಂಬಿಕೆಯ ಮೂಲಕವಾಗಿ ಯಾರು ತಮ್ಮ ಇಹಲೋಕದ ಬಾಗಿಲಿನ ನಿಲವು ಪಟ್ಟಿಗಳ ಮೇಲೆ ಹೇಬೇಲನ ರಕ್ತವು ಪ್ರತಿಕಾರವನ್ನು ಸಾರಿದುದರ (ಇಬ್ರಿಯ ೧೨:೨೪ ನೋಡಿರಿ) ವಿರೋಧವಾಗಿ ನಮಗಾಗಿ ಶಾಂತಿಯನ್ನು ಸಾರಿದಾತನ ರಕ್ತವನ್ನು ಪ್ರೋಕ್ಷಿಸುತ್ತಾರೋ ಅವರಲ್ಲದೆ ಬೇರೆ ಯಾರೂ ಇದರಲ್ಲಿ ಪಾಲು ತೆಗೆದುಕೊಳ್ಳಕೂಡದು. ಕ್ರಿಸ್ತನನ್ನು ತನ್ನ ಜೀವದಾಯಕನು ಎಂದು ಅಂಗೀಕರಿಸಿಕೊಂಡು ತನ್ಮೂಲಕ ಮನದಲ್ಲಿ ನಿಜವಾದ ಸಂತೋಷವನ್ನು ಅನುಭವಿಸದ ಯಾರೂ ಇದರಲ್ಲಿ ಪಾಲುತೆಗೆದುಕೊಳ್ಳುವಂತಿಲ್ಲ. ಒಂದೇ ದೇಹದ, ಒಂದೇ ರೊಟ್ಟಿಯ ಭಾಗವಾಗಿರದ ಹೊರತು ಮತ್ತು ಆತನ ಜೀವ, ಆತನ ರಕ್ತ ಇವುಗಳು ಕರ್ತನದರೊಂದಿಗೆ ಅದೇ ಪಾನಪಾತ್ರೆಯಲ್ಲಿ ಎಣಿಕೆ ಮಾಡಿಕೊಳ್ಳದ ಯಾರೂ ಇದರಲ್ಲಿ ಭಾಗವಹಿಸಲಾಗದು. ಇಲ್ಲಿ ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ನಡುವೆ ಮಾತ್ರವಲ್ಲ, ಪ್ರತಿಷ್ಠಿಸಿಕೊಂಡವರ ಮತ್ತು ಪ್ರತಿಷ್ಠಿಸಿಕೊಳ್ಳದವರ ನಡುವೆಯೂ ಸ್ಪಷ್ಟವಾದ ಭಿನ್ನತೆ ತೋರುವ ರೇಖೆಯೊಂದಿದೆ. ಹೀಗಿದ್ದಾಗ್ಯೂ ಇಂಥಾಃ ರೇಖೆಯನ್ನು ಪ್ರತಿಯೊಬ್ಬನೂ ತನ್ನ ಕಸಬು ಒಳ್ಳೆಯದಾಗಿದ್ದು ಅವುಗಳು ವಿವೇಚನಾಪೂರ್ವಕವಾಗಿ ತನ್ನ ಬಾಹ್ಯ ನಡತೆಗಳಿಂದ ಪ್ರಾಮಾಣಿಕೃತವಾಗುವವರೆಗೆ ತಾನಾಗಿಯೇ ವ್ಯಕ್ತಿಗತವಾಗಿ ಹಾಕಿಕೊಳ್ಳತಕ್ಕದ್ದು. ಒಬ್ಬ ವ್ಯಕ್ತಿ ಮತ್ತೊಬ್ಬನ ನಿರ್ಣಯ ಮಾಡುವುದಲ್ಲ, ಸಭೆಯೂ ಇದನ್ನು ನಿರ್ಣಯಿಸುವುದಲ್ಲ. ಈಗಾಗಲೇ ಗಮನಿಸಿದಂತೆ ಪ್ರಸ್ತಾಪವು ಅದರ ಮುಂದೆ ನಿಗಧಿಪಡಿಸಿದ ನಿಯಮಗಳಿಗನುಸಾರವಾಗಿ ಒಂದು ನಿರ್ಧಿಷ್ಟ ವಾದ ರೂಪದಲ್ಲಿ ಬಂದಿದೆ. ಇಲ್ಲವಾದಲ್ಲಿ ಸಭಾ ಹಿರಿಯರು ಅಥವಾ ಸಭೆಯಪ್ರತಿನಿಧಿಗಳು ಈ ಶರತ್ತು ಮತ್ತು ನಿಯಮಾವಳಿಗಳನ್ನು ತಮ್ಮ ಮುಂದಿಟ್ಟುಕೊಳ್ಳುವವರ ಮುಂದೆ (೧) ರಕ್ತದ ಮೇಲೆ ನಂಬಿಕೆ ಮತ್ತು (೨) ಕರ್ತನಿಗೆ ಮತ್ತು ಆತನ ಸೇವೆಯಲ್ಲಿ ಮರಣ ಪರ್ಯಂತ

---

* ಹಿಂದಿನ ಅಧ್ಯಾಯವನ್ನು ನೋಡಿರಿ

ಪ್ರತಿಷ್ಠಿಸಿಕೊಳ್ಳುವಿಕೆ ಎಂಬೀ ವಿಷಯಗಳನ್ನು ಸಜ್ಜುಗೊಳಿಸಿದ ನಂತರದಲ್ಲಿ ಈ ರೀತಿಯ ಮನಸ್ಸುಳ್ಳವರನ್ನು, ಪ್ರತಿಷ್ಠಿಸಿಕೊಂಡವರನ್ನು ಕರ್ತನ ಮತ್ತು ತಮ್ಮ ಸ್ವಂತದ ಮರಣವನ್ನು ಆಚರಿಸಿಕೊಳ್ಳುವಂತೆ ಆಹ್ವಾನಿಸಬೇಕು. ಇದು ಮತ್ತು ಈ ಆಚರಣೆಗೆ ಸಂಬಂಧಿಸಿದ ಎಲ್ಲಾ ಅಹ್ವಾನಗಳನ್ನು ಯಾವುದೇ ಪಂಗಡೀಕರಣಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ವ್ಯಾಪಕವಾಗಿ ವ್ಯಾಪಕವಾಗಿ ನಿವೇದಿಸಬೇಕು. ಅವರುಗಳಿಗೆ ಈ ಪ್ರಾಥಮಿಕ ಸತ್ಯಗಳ ಅಂದರೆ, ಅಮೂಲ್ಯವಾದ ರಕ್ತದ ಮೂಲಕ ವಿಮೋಚನೆ, ಮರಣ ಪರ್ಯಂತ ಸಂಪೂರ್ಣವಾದ ಪ್ರತಿಷ್ಟೆ ಇವುಗಳು ನೀತಿನಿರ್ಣಯದ ಮೇಲೆ ಕಟ್ಟಲ್ಪಟ್ಟಿರುವಿಕೆ ಇವುಗಳ ಬಗ್ಗೆ ಸಂಪೂರ್ಣ ಒಪ್ಪಿಗೆ ಇರುವುದಾದಲ್ಲಿ ಇತರ ವಿಷಯಗಳಲ್ಲಿ ಅವರ ವಿಶ್ವಾಸ ಮತ್ತು ಸಾಮರಸ್ಯದ ಬೇಧವಿಲ್ಲದೆ ಎಲ್ಲರನ್ನೂ ಸ್ವಾಗತಿಸಬೇಕು.

ಇಲ್ಲಿ ಈ ಕೆಳಕಂಡ ಅಪೋಸ್ತಲನ ಮಾತುಗಳು ಸೂಕ್ತವಾಗಿವೆ :-

***" ಹೀಗಿರುವುದರಿಂದ, ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹಮಾಡಿದವನಾಗಿರುವನು. ಪ್ರತಿಯೊಬ್ಬನೂ ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕೆಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವುದರಿಂದ ನ್ಯಾಯತೀರ್ಪಿಗೆ ಒಳಗಾಗುವನು"*** *( ೧ ಕೊರಿ ೧೧:೨೭-೨೯)*

ಇಲ್ಲಿ ಅಪೋಸ್ತಲನ ಎಚ್ಚರಿಕೆಯು ನಿರ್ಲಕ್ಷತೆಯಿಂದ ಅಂದರೆ ಇದನ್ನು ಒಂದು ಹಬ್ಬದೋಪಾದಿಯಲ್ಲಿ ಮಾಡಿ ಅದರಲ್ಲಿ ಬೆರೆಯಲು ಜನರನ್ನು ಆಹ್ವಾನಿಸುವ ರೀತಿಯಲ್ಲಿ ಈ ಸ್ಮಾರಕವನ್ನು ಆಚರಿಸುವವರ ವಿರುದ್ಧವೆಂದು ಕಂಡುಬರುತ್ತದೆ. ಇದು ಆ ರೀತಿಯ ಹಬ್ಬವಲ್ಲ. ಇದೊಂದು ಕರ್ತನ ದೇಹದ ಅಂಗಗಳಿಗಷ್ಟೇ ಮಿಸಲಾದ ಒಂದು ಗಂಭೀರವಾದ ಸ್ಮಾರಕ ಆಚರಣೆಯಾಗಿದೆ ; ರೊಟ್ಟಿಯು ಯೇಸುವಿನ ದೇಹವಾಗಿದೆ, ಮತ್ತು ಪಾತ್ರೆಯಲ್ಲಿರುವುದು ಆತನ ರಕ್ತವನ್ನು ಪ್ರತಿನಿಧಿಸುತ್ತದೆ ಎಂದು ಯಾರು ಗ್ರಹಿಸುವುದಿಲ್ಲವೋ ಅಂಥವರು ಇದರಲ್ಲಿ ಭಾಗವಹಿಸುವುದರ ಮೂಲಕ ದಂಡನೆಗೆ ಒಳಗಾಗುತ್ತಾರೆಯೇ ಹೊರತು ಸಾಮಾನ್ಯ ರೀತಿಯಲ್ಲಿ ನೆನಸುವಂತೆ ನರಕಶಿಕ್ಷೆಗಲ್ಲ. ಈ ದಂಡನೆಯು ಕರ್ತನ ದೃಷ್ಟಿಗೆ ತಕ್ಕದ್ದು ಮತ್ತು ಆತನ ಸ್ವಂತ ಪ್ರಜ್ಞೆಗೆ ಅನುಸಾರವಾದುದು. ಆದುದರಿಂದ ಈ ಲಾಂಛನಗಳಲ್ಲಿ ಭಾಗವಹಿಸುವ ಮುನ್ನ ಪ್ರತಿಯೊಬ್ಬನೂ ಆ ಮುರಿದ ದೇಹವು, ಸುರಿಸಿದ ನಮ್ಮ ಕರ್ತನ ರಕ್ತವು ನಮ್ಮ ಪಾಪ ಪರಿಹಾರದ ಈಡು ಬಲಿಯಾಗಿದೆ ಎಂಬುದನ್ನು ತಾನು ನಂಬುತ್ತೇನೆಯೋ ಇಲ್ಲವೋ ಎಂಬುದನ್ನು, ಎರಡನೆಯದಾಗಿ, ತಾನು ಆ ಒಂದೇ ದೇಹದ ಅಂಗವಾಗುವಂತೆ ಪರಿಗಣಿಸಲು ಮಾಡಿಕೊಳ್ಳಬೇಕಾದ ಎಲ್ಲ ಪ್ರತಿಷ್ಟೆಯನ್ನೂ ಮಾಡಿಕೊಂಡಿದ್ದೇನೆಯೋ ಎಂಬುದನ್ನು ಪರೀಕ್ಷಿಸಿಕೊಳ್ಳತಕ್ಕದ್ದು.

ಕರ್ತನ ಮೇಜಿಗೆ ಯಾರ್‍ಯಾರು ಪ್ರವೇಶಾಧಿಕಾರ ಹೊಂದಿದ್ದಾರೋ, ಹಾಗೂ ಯಾರ್‍ಯಾರು ಇದರಿಂದ ಬಿಡಲ್ಪಟ್ಟವರಾಗಿದ್ದಾರೋ ಎಂಬುದನ್ನು ಗಮನಿಸಿಕೊಂಡು ನಾವು ಈ ಸತ್ಯವಾದ ಪವಿತ್ರ ಸಭೆಯ ಎಲ್ಲಾ ಸದಸ್ಯರುಗಳೂ ಕರ್ತನು ನೇಮಿಸಿದ ನಿಯಮಗಳಿಗನುಸಾರವಾಗಿ (ಮತ್ತಾಯ ೧೮:೧೫-೧೭ ನೋಡಿರಿ) ಸಮಗ್ರ ಸಭೆಯ ಸಾರ್ವಜನಿಕವಾದ ಭಹಿಷ್ಕಾರಕ್ಕೆ ಒಳಗಾಗದಿದ್ದಲ್ಲಿ ಅಂತವರೆಲ್ಲರೂ ಇದರಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿದ್ದಾರೆ.

ಇಂತವರು ಮಾತ್ರವೇ ಇದನ್ನು ಆಚರಿಸಬಹುದು : ಅಂಥವರು ಖಂಡಿತವಾಗಿಯೂ ಇದನ್ನು ಆಚರಿಸಲು ಇಷ್ಟಪಡುವವರಾಗಿದ್ದಾರೆ – ಖಂಡಿತವಾಗಿ ನಮ್ಮ ಕರ್ತನು ತನ್ನ ಮರಣದ ಮುನ್ನ ವಿಧಿಸಿದ "***ಇದನ್ನು ಎಲ್ಲರೂ ತಿನ್ನಿರಿ, ಇದರಲ್ಲಿ ಎಲ್ಲರೂ ಕುಡಿಯಿರಿ***" ಎಂಬ ಎಚ್ಚರಿಕೆಯ ಆಜ್ಞೆಗಳನ್ನು ಪಾಲಿಸುತ್ತಾರೆ. ನಾವು ಮನುಷ್ಯಕುಮಾರನ ದೇಹವನ್ನು ತಿನ್ನದ ಹೊರತು ಮತ್ತು ಆತನ ರಕ್ತವನ್ನು ಕುಡಿಯದ ಹೊರತು ನಮ್ಮಲ್ಲಿ ಜೀವವಿಲ್ಲ ಎಂಬುದನ್ನು ಅವರು ಗ್ರಹಿಸಿಕೊಳ್ಳುತ್ತಾರೆ. ಅವರು ತಮ್ಮ ಹೃದಯ ಮತ್ತು ಮನಸ್ಸುಗಳಲ್ಲಿ ಕರ್ತನ ತ್ಯಾಗದ ಅರ್ಹತೆಯಲ್ಲಿ ಮತ್ತು ಆತನ ಜೀವನದಲ್ಲಿ ನಿಜವಾಗಿ ಪಾಲು ತೆಗೆದು ಕೊಂಡಿರುವುದಾದಲ್ಲಿ ಇದನ್ನು ನೆನಪು ಮಾಡಿಕೊಳ್ಳುವುದು ಮತ್ತು ಇತರರ ಮುಂದೆ ಮತ್ತು ಕರ್ತನ ಮುಂದೆ ಇದನ್ನು ಅರಿಕೆಮಾಡುವುದು ಅದೆಷ್ಟೋ ಭಾಗ್ಯಕರ ಮತ್ತು ಆನಂದದಾಯಕ!

## *ಯಾರು ಈ ಕಾರ್ಯನಿರ್ವಹಿಸಬಹುದು?*

ಈ ಆಚರಣೆಯನ್ನು ಮತ್ತು ಇಂಥಾಃ ಹಲವು ಆಚರಣೆಗಳನ್ನು ನೆರವೇರಿಸಲು 'ಮಾಸ್' ಎಂಬ ತಪ್ಪು ಸಿದ್ಧಾಂತ, ಮತ್ತು ಸಭೆಯಲ್ಲಿ ಪುರೋಹಿತರೆಂಬ ವರ್ಗದ ಸೃಷ್ಟಿ ಇವುಗಳು ಸಾರ್ವಜನಿಕರ ದೃಷ್ಟಿಯಲ್ಲಿ ಪ್ರೊತಾಸ್ತಾಂತರು ಇಂದಿಗೂ ಆಶೀರ್ವಾದ ಪಡೆಯಲು ಮತ್ತು ಇಂಥಾಃ ಸ್ಮಾರಕ ಆರಾಧನೆಗಳನ್ನು ನೆರವೇರಿಸಲು ಒರ್ವ ಹಸ್ತಾರ್ಪಣೆ ಹೊಂದಿದ ಪುರೋಹಿತರು ಸಂಪೂರ್ಣವಾದ ಅಗತ್ಯವಿದೆಯೆಂದು ಮತ್ತು ಯಾವುದೇ ಬೇರೆ ಪದ್ಧತಿಯು ಧರ್ಮದ್ರೋಹವೆಂದು ತಿಳುಕೊಂಡಿದ್ದಾರೆ ಎಂಬ ಭಾವನೆಯನ್ನುಂಟುಮಾಡಿದೆ. ಇಂಥಾಃ ಸಿದ್ಧಾಂತಗಳೆಲ್ಲವೂ ಸಂಪೂರ್ಣವಾಗಿ ತಪ್ಪು ಎಂಬುದು ಈ ಸ್ಮಾರಕದಲ್ಲಿ ಭಾಗವಹಿಸುವ ಪ್ರವೇಶಾಧಿಕಾರವನ್ನು ಹೊಂದಿದವರೆಲ್ಲರೂ "ರಾಜ ಯಾಜಕತ್ವ"ದ ಸದಸ್ಯರುಗಳು ಎಂಬುದನ್ನು ಗ್ರಹಿಸುವಾಗ ಮಾತ್ರವೇ ತಿಳಿದು ಬರುತ್ತದೆ. ಈ ಸದಸ್ಯರುಗಳು ಕರ್ತನಿಂದ ಆತನ ವಾಕ್ಯಗಳನ್ನು ತಮ್ಮ ಮೇಧಾಶಕ್ತಿ ಮತ್ತು ಅವಕಾಶಗಳಿಗನುಸಾರವಾಗಿ ತಮ್ಮ ಯೋಗ್ಯತೆಗೆ ತಕ್ಕಂತೆ ಸಾರುವ ಮತ್ತು ಯಾವುದೇ ಆರಾಧನೆ ಅಥವಾ ಸೇವೆಯನ್ನು ಆತನಿಗೆ, ಆತನ ದೇಹದ ಅಂಗಗಳಿಗೆ, ಆತನ ಹೆಸರಿನಲ್ಲಿ ಇತರರಿಗೆ ನೆರವೇರಿಸಲು ಪೂರ್ಣವಾಗಿ ಅಭಿಷಕ್ತರಾಗಿದ್ದಾರೆ. " ನೀವೆಲ್ಲರೂ ಸಹೋದರರುಗಳು" ಎಂಬುದು ಕರ್ತನ ನಿರ್ಧಿಷ್ಟ ಮಾನ ಎಂಬುದನ್ನು ಆತನೊಡನೆ ಅನ್ಯೂನತೆಯಲ್ಲಿರುವಾಗ ಮತ್ತು ಆತನ ವಿಮೋಚನಾ ಕಾರ್ಯವನ್ನು ನೆರವೇರಿಸುವಾಗ, ಮತ್ತು ಆತನೊಡನೆ ಮತ್ತು ಆತನ ಒಂದೇ ದೇಹದ ಇತರ ಅಂಗಗಳೊಡನೆ ಸರ್ವಸಾಮಾನ್ಯವಾದ ಸಂಗತ್ಯದಲ್ಲಿರುವಾಗ ನಾವು ಮರೆಯಬಾರದು.

ಪರಂತು, ನಾವೀಗಾಗಲೇ ಗಮನಿಸಿರುವಂತೆ ಸತ್ಯವೇದವು ಹೇಳುವಂತೆ ಕರ್ತನ ಪ್ರತಿಯೊಂದು ಸಣ್ಣ ಗುಂಪಿನಲ್ಲಿಯೂ , ಪ್ರತಿಯೊಂದು ಸಣ್ಣಸಭೆ ಎಂಬ ಕ್ರಿಸ್ತನ ದೇಹ ದಲ್ಲಿಯೂ ಎಲ್ಲವೂ ಕ್ರಮಬದ್ಧವಾಗಿರಬೇಕು. ಈ ಕ್ರಮಬದ್ಧತೆಯ ಭಾಗವಾಗಿ ಪ್ರತಿಯೊಂದು ಸಭೆಯಲ್ಲಿಯೂ 'ಸಭಾ ಹಿರಿಯರು' ಇರತಕ್ಕದ್ದು. ಪವಿತ್ರ ಸಭೆಯ ಪ್ರತಿಯೊಬ್ಬ ಸದಸ್ಯನಿಗೂ ಅಂದರೆ ನೂತನ ಸೃಷ್ಟಿಗೆ ಕರ್ತನ ಸಾಕಷ್ಟು ಅಭಿಷೇಕವಾಗಿರುವಾಗ ಮತ್ತು ಆತನ ಸ್ಮಾರಕ ಆರಾಧನೆಯಲ್ಲಿ ಯಾವುದೇ ಭಾಗದಲ್ಲಿ ಭಾಗವಹಿಸಲು ಅನುಮತಿ ದೊರೆತಿರುವಾಗ ಸಭೆಯು ಹಿರಿಯರನ್ನು ಚುನಾಯಿಸಿಕೊಳ್ಳುವುದು ಇಂಥಾಃ ಸಂಗತಿಗಳಲ್ಲಿ ಅವರು ಸಮಗ್ರ ಸಭೆಯ

ಪ್ರತಿನಿಧಿಗಳಾಗಿರುತ್ತಾರೆ ಎಂಬುದನ್ನು ಸೂಚಿಸುತ್ತದೆ. ಆದುದರಿಂದ ಈ ಸ್ಮಾರಕವನ್ನು ವ್ಯವಸ್ಥೆಪಡಿಸುವುದು ಮತ್ತು ನೆರವೇರಿಸುವುದು ಅವರು ಈಗಾಗಲೇ ಸಭೆಯಿಂದ ಚುನಾಯಿತ ರಾಗಿರುವ ಸೇವೆಯಲ್ಲಿ ಅವರಿಗೆ ಪ್ರಾಪ್ತವಾಗಿದೆ.

***" ಎಲ್ಲಿ ಇಬ್ಬರಾಗಲೀ ಮೂವರಾಗಲೀ ನನ್ನ ಹೆಸರಿನಲ್ಲಿ ಕೂಡಿಬರುತ್ತಾರೋ ಅವರ ಮಧ್ಯದಲ್ಲಿ ನಾನಿರುತ್ತೇನೆ"*** ಎಂಬ ನಮ್ಮ ಕರ್ತನು ಪ್ರಕಟನೆಯು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಇದನ್ನು ಆತನ ದೇಹದ ಸಹ ಸದಸ್ಯರೊಡನೆ ಆಚರಿಸತಕ್ಕದ್ದು ಎಂಬುದನ್ನು ನಮಗೆ ನಿರ್ಧಾರಾತ್ಮಕವಾಗಿ ತೋರಿಸಿಕೊಡುತ್ತದೆ. ಇದಕ್ಕೆ ಹೊಂದಿಕೊಡಿರುವ ಆಶೀರ್ವಾದವು ಸದಸ್ಯರನ್ನು ವಾರ್ಷಿಕ ಕೂಡುವಿಕೆಯಲ್ಲಿ ಮಾತ್ರವಲ್ಲ, ಸಾಧ್ಯವಾದಾಗಲೆಲ್ಲಾ ಒಬ್ಬರೆಡೆಗೆ ಮತ್ತೊಬ್ಬರನ್ನು ಸೆಳೆಯುವುದಾಗಿದೆ. ಇಬ್ಬರಾಗಲೀ, ಮೂವರಾಗಲೀ ಸೇರಿಬಂದು ಈ ವಾಗ್ದಾನವನ್ನು ಹಕ್ಕಿನಿಂದ ಕೇಳುವಾಗ, ದೊಡ್ಡಗುಂಪಿನೊಂದಿಗೆ ಸೇರಲು ಸಾಧ್ಯವಿಲ್ಲ ದಿರುವಾಗ ಅಥವಾ ಅನುಕೂಲವಿಲ್ಲದಿರುವಾಗ ಅವರು ಒಂದು ಸಭೆಯಂತೆ, ಒಂದು ಸಮಗ್ರವಾದ ಪವಿತ್ರ ಕ್ರೈಸ್ತ ಸಭೆಯಂತೆ ಇದನ್ನು ಆಚರಿಸುವ ಸೌಕರ್ಯವನ್ನು ಪಡೆದಿದ್ದಾರೆ. ಒರ್ವ ಏಕೈಕ ವ್ಯಕ್ತಿಯು ಬಹುಶಃ ಇತರರನ್ನು ಬೇಟಿ ಮಾಡಲಾಗದ ಪರಿಸ್ಥಿತಿಯಲ್ಲಿ ಸಿಲುಕಿರು ವಾಗಲೂ, ಆತನಿಗೆ ತಾನು ದೇವರೊಡಗೂಡಿ ಇಬ್ಬರಾಗಿದ್ದೇವೆ ಎಂಬ ದೃಢವಾದ ವಿಶ್ವಾಸವಿರುವಲ್ಲಿ ಆತನೂ ಸಹಾ ಈ ಸೌಕರ್ಯಕ್ಕೆ ಬಾಧ್ಯನಾಗಿದ್ದಾನೆ. ಇಂಥಾಃ ನಿವಾರಿಸಲಾಗದ ಏಕಾಂತತೆಯು ಯಾರಿಗಾದರೂ ವಾರ್ಷಿಕ ಮಹಾ ಪಾಪ ನಿವಾರಣಾ ಯಜ್ಞದ ಆಚರಣೆಯಲ್ಲಿ ಮತ್ತು ಕರ್ತನೊಡನೆ ಅದರಲ್ಲಿ ನಮ್ಮ ಭಾಗವಹಿಸುವಿಕೆಗೆ ಮತ್ತು ಆ ಏಕಾಂಗಿ ವ್ಯಕ್ತಿಗೆ ರೊಟ್ಟಿಯ ಒದಗಿಸುವಿಕೆ (ಸಾಧ್ಯವಾದರೆ ಸೋಡಾ ಬಿಸ್ಕತ್ತು ಅಥವಾ ವಾಟರ್ ಕ್ರಾಕರ್‌ನಂಥಃ ಹುಳಿಯಿಲ್ಲದ ರೊಟ್ಟಿ) ಮತ್ತು ದ್ರಾಕ್ಷಾ ರಸವನ್ನು ಮಾಡಬಹುದಾದ ದ್ರಾಕ್ಷೆ ಹಣ್ಣು* ಇವುಗಳ ಒದಗಿಸುವಿಕೆಗೆ ಆ ಮೂಲಕ ಆತನು ತನ್ನ ಆತ್ಮನಲ್ಲಿ ಕರ್ತನೊಡನೆ ಮತ್ತು ಅವಶ್ಯವಾಗಿ ಬೇರ್ಪಟ್ಟಿರುವ ಆತನ ದೇಹದ ಇತರ ಅಂಗಗಳೊಂದಿಗೆ ಅನ್ಯೂನತೆ ಹೊಂದಿಕೊಳ್ಳಲು ಅಡ್ಡಿಯಾಗಬಾರದೆಂದು ನಾವು ಬುದ್ಧಿವಾದ ಹೇಳುತ್ತೇವೆ.

## *ಆರಾಧನಾ ಕ್ರಮ*

ನಮ್ಮ ಕರ್ತನು ಯಾವುದೇ ನಿಯಮವನ್ನಾಗಲೀ, ಕ್ರಮವನ್ನಾಗಲೀ ವಿಧಿಸದೇ ಇರುವುದರಿಂದ ನಾವು ಅವುಗಳನ್ನು ವಿಧಿಸುವಂತಿಲ್ಲ – ಆದರೂ ಅನೌಚಿತ್ಯವಿಲ್ಲದೆ ನಾವು ನಮಗೆ ಯಾವುದು ಮಿತವಾಗಿ, ವಿವೇಚನಾಶೀಲವಾಗಿ, ಕ್ರಮಬದ್ಧವಾದ ಆಚರಣೆಯಾಗಿ ಕಂಡು ಬರುವುದೋ ಅದನ್ನು ನಾವು ಶ್ಲಾಘಿಸ ಬಹುದಾಗಿದೆ. ಅದನ್ನು ಯಾವುದೇ ನಿಯಮ ಅಥವಾ

---

**** ನಾವು ಇದುವರೆಗೆ ನಿರ್ಣಯಿಸಿರುವಂತೆ ಈ ಸ್ಮಾರಕವನ್ನು ನೆರವೇರಿಸುವಾಗ ನಮ್ಮ ಕರ್ತನು ಉಕ್ಕೇರಿದ ದ್ರಾಕ್ಷಾರಸವನ್ನು ಉಪಯೋಗಿಸಿದನು. ಪರಂತು ಇಲ್ಲಿ ದ್ರಾಕ್ಷಾರಸವೆಂದು ನಿರ್ದಿಷ್ಟವಾಗಿ ಹೇಳದೆ ' ದ್ರಾಕ್ಷೆ ಹಣ್ಣಿನ ರಸ'ಎಂದು ಹೇಳಿರುವ ದೃಷ್ಟಿಕೋನದಲ್ಲಿ, ಮತ್ತು ನಮ್ಮ ಕಾಲದಲ್ಲಿ ಮದ್ಯಪಾನವು ಹೆಚ್ಚಾಗ್ದಿ ಒಂದು ದುಷ್ಟ ಶಕ್ತಿಯಾಗಿ ಬೆಳೆದಿರುವಾಗ, ಉಕ್ಕೇರದ ದ್ರಾಕ್ಷೆ ಹಣ್ಣಿನ ರಸವನ್ನು ಉಪಯೋಗಿಸಲು ಕರ್ತನ ಅನುಮತಿ ನಮಗೆ ದೊರೆಯುವುದೆಂದು ನಾವು ಭಾವಿಸಬಹುದು. ಬೇಕಿದ್ದರೆ, ಕರ್ತನಂತೆ ನಾವು ಉಕ್ಕೇರಿದ ದ್ರಾಕ್ಷಾರಸವನ್ನು ಉಪಯೋಗಿಸದಿದ್ದರೆ ಆತನ ಮಾತಿಗೆ ಅವಿಧೇಯರಾಗುತ್ತೇವೆಂಬ ಅನುಮಾನವುಳ್ಳವರ ಸಮಾಧಾನಕ್ಕಗಿ ಇದಕ್ಕೆ ಉಕ್ಕೇರಿದ ದ್ರಾಕ್ಷಾರಸದ ಕೆಲವು ಹನಿಗಳನ್ನು ಬೆರೆಸ ಬಹುದು ಈ ರೀತಿಮಾಡುವುದರಿಂದ ಕರ್ತನ ಯಾವ ಸಹೋದರನಿಗೂ, ಅವನು ಎಷ್ಟೇ ಬಲಹೀನನಿರಲಿ ಯಾವುದೇ ತೊಂದರೆಯೂ ಇರುವುದಿಲ್ಲ.***

ಶಾಸನವನ್ನಾಗಿ ಮಾಡಲಿಕ್ಕಾಗಿ ನಾವು ಹೀಗೆ ಮಾಡದೆ, ಒಂದು ಮಿತವಾದ ಆಚರಣೆ ವಿಷಯವನ್ನು ವಿಸ್ತಾರಗೊಳಿಸುವ ಅಭ್ಯಾಸ ಮಾಡಿಕೊಂಡಿರುವವರಿಗೆ ಮತ್ತು ಈ ರೀತಿ ಯಾವುದನ್ನೂ ಮಾಡದೇ ಇರುವವರಿಗೆ ಸಹಾಯಮಾಡುವ ಉದ್ಧೇಶದಿಂದ ಮಾಡುತ್ತೇವೆ. ನಮ್ಮ ಹೇಳಿಕೆಗಳನ್ನು ತಿದ್ದುಪಡಿ ಮುಂತಾದವುಗಳಿಗೆ ಬದ್ಧವಾದ ಕೇವಲ ಸಲಹೆಗಳು ಎಂಬಂತೆ ಇವನ್ನು ಪರಿಗಣಿಸತಕ್ಕದ್ದು. ಅವುಗಳು ಇಂತಿವೆ :–

(೧) ಆರಾಧನೆಯನ್ನು ಸಂಗೀತಗಳನ್ನು ಸಂಧರ್ಭೋಚಿತವಾದ ಒಂದು ಅಥವಾ ಹೆಚ್ಚು ಹಾಡುವುದರ ಮೂಲಕ ಗಂಭೀರವಾಗಿ ಪ್ರಾರಂಭ ಮಾಡುವುದು.

(೨) ಕೂಡಿರುವವರ ಮೇಲೆ, ವಿಶೇಷವಾಗಿ ಭಾಗವಹಿಸುವವರ ಮೇಲೆ ಆತ್ಮೀಕ ಆಶೀರ್ವಾದವು ಹರಿದು ಬರುವಂತೆ ಪ್ರಾರ್ಥಿಸುವುದು, ಇದರಲ್ಲಿ ಈ ಲೋಕದಲ್ಲಿರುವ ನಮಗೆ ತಿಳಿದಿರುವ ಮತ್ತು ತಿಳಿಯದಿರುವ ಅದೇ ದೇಹದ ಇತರ ಸಂಗಡಿಗರನ್ನು ವಿಶೇಷವಾಗಿ ಇದರ ವಾರ್ಷಿಕ ಆಚರಣೆ ಮಾಡುತ್ತಿರುವವರನ್ನು ನೆನಪುಮಾಡುವುದು.

(೩) ಇದನ್ನು ನೆರವೇರಿಸುವ ಹಿರಿಯರು ಮೂಲ ಆಚರಣೆಯಲ್ಲಿ ಈ ಬಗ್ಗೆ ಸತ್ಯವೇದದಲ್ಲಿ ಬರೆದಿರುವ ಮಾತುಗಳನ್ನು ಓದಬಹುದು.

(೪) ಅವರು ಅಥವಾ ಮತ್ತೊಬ್ಬ ಹಿರಿಯರು ಪ್ರಸ್ತಾಪದ ಬಗ್ಗೆ, ಸಂಕೇತ ಮತ್ತು ಪ್ರತಿಸಂಕೇತದ ಬಗ್ಗೆ ಪೂರ್ವಸಿದ್ಧತೆಯಿಲ್ಲದ ಅಥವಾ ಅನುರೂಪತೆಯಿಂದ ಕೂಡಿದ ವಿವರಣೆಗಳನ್ನು ನೀಡಬಹುದು. ಮನಸಿದ್ದಲ್ಲಿ ಈ ವಿವರಣೆಗಳನ್ನು ಮೊದಲಿನ ಉಪನ್ಯಾಸದೊಂದಿಗೆ ಓದಿ ಹೇಳಲೂ ಬಹುದು.

(೫) ನಮ್ಮ ಕರ್ತನು ರೊಟ್ಟಿಯನ್ನು ಮುರಿಯುವ ಮೊದಲೇ ಅದನ್ನು ಆಶೀರ್ವದಿಸಿದನು ಎಂಬುದನ್ನು ಗಮನದಲ್ಲಿರಿಸಿಕೊಂಡು ನಾಯಕನು ಅರ್ಹನಾದ ಸಹೋದರನೊಬ್ಬನನ್ನು ಕರೆದು ರೊಟ್ಟಿಯನ್ನು ಆಶೀರ್ವದಿಸುವಂತೆ ಪ್ರಾರ್ಥಿಸಲು ಹೇಳಬಹುದು ಅಥವಾ ಅವನನ್ನು ಹೊರತುಪಡಿಸಿ ಅರ್ಹರಾದವರು ಬೇರೆ ಯಾರೂ ಇಲ್ಲವಾದಲ್ಲಿ ಆತನೇ ರೊಟ್ಟಿಯ ಮೇಲೆ ಮತ್ತು ಭಾಗವಹಿಸುವವರ ಮೇಲೆ ಅವರ ಜ್ಞಾನದ ಕಣ್ಣುಗಳು ವಿಶಾಲವಾಗಿ ತೆರೆಯಲ್ಪಟ್ಟು ಅವರು ಈ ಸಂಸ್ಕಾರಕ್ಕೆ ಅಂಟಿಕೊಂಡಿರುವ ಅರ್ಥದ ಆಳವನ್ನು ಗ್ರಹಿಸಿಕೊಳ್ಳಲು ಶಕ್ತರಾಗುವಂತೆ ದೈವಾಶೀರ್ವಾದವನ್ನು ಆವಾಹನ ಮಾಡಬೇಕು. ಈ ರೀತಿಯಲ್ಲಿ ಅವರು ಆತನ ದೇಹದ ಈ ಸಂಕೇತವನ್ನು ಉಪಯೋಗಿಸುವುದರಲ್ಲಿ ಕರ್ತನೊಂದಿಗೆ ಆಶೀರ್ವಾದದಾಯಕ ಅನ್ಯೂನತೆ ಯಲ್ಲಿ ಭಾಗವಹಿಸುವಂತೆಯೂ ಮತ್ತು ಅವರುಗಳು ತಮ್ಮನ್ನೇ ಆತನೊಂದಿಗೆ ಮುರಿಯುವ ಪ್ರತಿಷ್ಠೆಯನ್ನು ನವೀಕರಿಸಿಕೊಳ್ಳುವಂತೆಯೂ ಪ್ರಾರ್ಥಿಸಬೇಕು.

(೬) ನಂತರದಲ್ಲಿ ಕ್ರಾಕರ್ ಅಥವಾ ಹುಳಿಯಿಲ್ಲದ ರೊಟ್ಟಿಯ ಒಂದು ತುಂಡನ್ನು ಕೈಯಲ್ಲಿ ತೆಗೆದುಕೊಂಡು ***" ಇದು ನಿಮಗಾಗಿ ಮುರಿಯಲ್ಪಟ್ಟ ನನ್ನ ದೇಹ, ಇದನ್ನು ನೀವೆಲ್ಲರೂ ತಿನ್ನಿರಿ"*** ಎಂಬ ಕರ್ತನ ಮಾತುಗಳೊಂದಿಗೆ ಮುರಿಯಬಹುದು ಮತ್ತು ತಟ್ಟೆಯನ್ನು ಸಹೋದರರಲ್ಲಿ ಒಬ್ಬರು ಅಥವಾ ನೆರವೇರಿಸುವವರೇ ಬಡಿಸಬಹುದು. ಸಭಿಕರು ಹೆಚ್ಚಾಗಿದ್ದಲ್ಲಿ ಹೆಚ್ಚಿನ ಸಂಖ್ಯೆಯ ತಟ್ಟೆಗಳಲ್ಲಿ ರೊಟ್ಟಿಯನ್ನು ಒಂದೇ ಸಮಯದಲ್ಲಿ ಇಬ್ಬರು, ನಾಲ್ವರು ಅಥವಾ ಆರು ಮಂದಿ ಅಥವಾ ಪ್ರತಿಷ್ಠೆ ಹೊಂದಿದ ಎಷ್ಟೇ ಸಹೋದರರಾದರೂ ಬಡಿಸಬಹುದು.

(೭) ಲಾಂಛನಗಳನ್ನು ಹಂಚುವಾಗ ಮೇಲಿನ ಸಂಕ್ಷಿಪ್ತ ಮಾತುಗಳನ್ನು ಹೊರತುಪಡಿಸಿ ಆದಷ್ಟು ಮೌನವನ್ನು ಕಾಪಾಡಿಕೊಳ್ಳಬೇಕು. ಈ ಮಾತುಗಳು ರೊಟ್ಟಿಯ ಪ್ರಮುಖ್ಯತೆಗೆ ಮಾತ್ರವೇ, ಅವುಗಳನ್ನು ಸ್ವೀಕರಿಸುವುದರಿಂದ ಯಾವ ರೀತಿಯಲ್ಲಿ ನಾವು ಕರ್ತನನ್ನೇ ಸ್ವೀಕರಿಸುತ್ತೇವೆ ಎಂಬುದಕ್ಕೆ ಮಾತ್ರವೇ ಮೀಸಲಾಗಿದ್ದಲ್ಲಿ ಅನುಚಿತವೆನಿಸದು. ಇವುಗಳ ಬಗ್ಗೆ ಸಾಮಾನ್ಯವಾಗಿ ಈ ಸಂಸ್ಕಾರವನ್ನು ನೀಡುವ ಮೊದಲೇ ನಾಯಕನಿಂದ ಅಥವಾ ಬೇರೆ ಹಿರಿಯರಿಂದ ವಿವರಣೆ ನೀಡುವುದು ಒಳ್ಳೆಯದಾದರೂ ಭಾಗವಹಿಸುವವರ ಅನ್ಯೂನತೆಗೆ ಇದು ಅತಿಕ್ರಮಣ ಮಾಡಬಾರದು

(೮) ನಂತರದಲ್ಲಿ ಪಾತ್ರೆಯ ಮೇಲೆ ಆಶಿರ್ವಾದಕ್ಕಾಗಿ ಈ ರೀತಿಯಾಗಿ ಬೇಡಿಕೊಳ್ಳಬೇಕು. ***"ಕರ್ತನು ಪಾತೆಯನ್ನು ತೆಗೆದುಕೊಂಡು ಅದನ್ನು ಆಶಿರ್ವದಿಸಿದನು"*** ಎಂಬ ಮಾತುಗಳನ್ನು ಹೇಳುತ್ತಿರುವಂತೆಯೇ ಯಾರಾದರೂ ಕೃತಜ್ಞತಾ ಪ್ರಾರ್ಥನೆಯನ್ನು ಮಾಡಿ ಭಾಗವಹಿಸುವವರಿಗಾಗಿ ದೈವಾಶೀರ್ವಾದ ವನ್ನು ಬೇಡಿಕೊಳ್ಳುವಂತೆ ಹೇಳಬೇಕು. ನಂತರದಲ್ಲಿ ಇದನ್ನು ಸಹಾ ಮೌನವಾಗಿ ನೀಡಬೇಕು.

(೯) ಈ ರೀತಿಯಲ್ಲಿ ಆರಾಧನೆ ಮುಗಿದಿರುವಾಗ ಕರ್ತನ ಮತ್ತು ಅಪೋಸ್ತಲರ ಕ್ರಮವನ್ನು ಕಡೆಯವರೆಗೂ ಅನುಸರಿಸಬೇಕೆಂದು ನಾವು ಬುದ್ಧಿವಾದ ನೀಡುತ್ತೇವೆ – ಕಡೆಯಲ್ಲಿ ಒಂದು ಸಂಗೀತ ಹಾಡಿದ ನಂತರ ಯಾವುದೇ ಮುಕ್ತಾಯ ಪ್ರಾರ್ಥನೆ ಇಲ್ಲದಂತೆ ಜನರನ್ನು ವಿಸರ್ಜಿಸಬೇಕು. ಈ ಸಂಧರ್ಭದಲ್ಲಿ ಯಾವುದೇ ಶುಭಾಶಯಗಳ ವಿನಿಮಯ, ಯೋಗಕ್ಷೇಮದ ವಿಚಾರಣೆ ಮುಂತಾದವುಗಳನ್ನು ಮಾಡದೆ ಅವರ ಪರ್ಯಾಲೋಚನೆಗೆ ಮತ್ತು ಅನ್ಯೂನತೆಗೆ ಯಾವುದೇ ದಕ್ಕೆ ಉಂಟಾಗದೆ ಅವರು ತಮ್ಮ ತಮ್ಮ ಮನೆಗಳಿಗೆ ಹೋಗುವಂತೆ ಆದಷ್ಟು ಅವಕಾಶವನ್ನು ನೀಡಬೇಕು. ಅಂದಿನ ರಾತ್ರಿ ಮಾತ್ರವಲ್ಲ ಮಾರನೆಯ ದಿನವೂ ಅವರು ಗೆತ್ಸೆಮನೆಯಲ್ಲಿ ನಮ್ಮ ಕರ್ತನ ಅನುಭವವನ್ನು ಮತ್ತು ಆತನಿಗೆ ಅವಶ್ಯವಾಗಿದ್ದ ಸಹಾಯ ಮತ್ತು ಸಹಾನುಭೂತಿ ಇವುಗಳನ್ನು ಪಡಕೊಂಡಂತೆ ಆತನ ದೇಹದ ಎಲ್ಲಾ ಅಂಗಗಳೂ ಇಂಥಾಃ ಗೆತ್ಸೆಮನೆಯ

ಅನುಭವವನ್ನು ಪಡೆಯಬಹುದೆಂಬ ಮತ್ತು ಸಹ ಶಿಷ್ಯರುಗಳ ಸಹಾಯ ಇವುಗಳ ಸತ್ಯವನ್ನು ನೆನಪಿಸಿಕೊಳ್ಳುವಂತಾಗಬೇಕು.

ಒಡೆಯನ ಬಗ್ಗೆ "ಆತನ ಬಳಿ ಮನುಷ್ಯರಾದವರೂ ಯಾರೂ ಇರಲಿಲ್ಲ – ಆತನ ಕಷ್ಟಕಾಲದಲ್ಲಿ ಆತನಿಗೆ ಅನುಕಂಪ ತೋರಿಸುವವರು ಒಬ್ಬನಾದರೂ ಇರಲಿಲ್ಲ. ನಮ್ಮ ಬಗ್ಗೆಯಾದರೋ ಹಾಗಿಲ್ಲ, ಇದು ಭಿನ್ನವಾಗಿದೆ. ನಮ್ಮೊಡನೆ ನಮ್ಮಂತೆಯೇ ಮರಣದಲ್ಲಿ ದೀಕ್ಷಾಸ್ನಾನ ಪಡಕೊಂಡ ಸಹ ಸದಸ್ಯರು ಇದ್ದಾರೆ. ಅವರು ನಮ್ಮಂತೆಯೇ ಒಂದೇ ರೊಟ್ಟಿಯ ಮುರಿದ ಭಾಗವಾಗಿದ್ದೇವೆಂಬ ಪ್ರತಿಜ್ಞೆ ಮಾಡಿದವರಾಗಿದ್ದು ಪವಿತ್ರಾತ್ಮನಿಂದ ಅಭಿಷೇಕಿಸಲ್ಪಟ್ಟು ಅಂಗೀಕಾರ ಪಡೆದಿದ್ದಾರೆ. ನಾವು ಇದನ್ನು ನೆನಪುಮಾಡುವಾಗ ನಾವು ಬಹು ನಿಷ್ಠೆಯಿಂದ ದೇಹದ ಸಹ ಸದಸ್ಯರಿಗೆ ಸಹಾಯ ಮಾಡಲು ಬಯಸೋಣ, ದೇಹದ ಕನಿಷ್ಟರಾದವರಿಗೆ ಮಾಡಿದ್ದು ದೇಹದ ಶಿರಕ್ಕೇ ಮಾಡಿದಂತೆ, ಇದರಿಂದ ಆತನ ಮೆಚ್ಚುಗೆಗೆ ಪಾತ್ರರಾಗುತ್ತೇವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಅದೇ ಸಮಯದಲ್ಲಿ ನಾವು ಸೂಕ್ತವಾಗಿ ಪೇತ್ರನ ಉದಾಹರಣೆಯನ್ನು ಅಂದರೆ ಕರ್ತನ ಸೇವೆಯಲ್ಲಿ ಆತನ ನಿಷ್ಠಾಭರಿತ ಶ್ರದ್ಧೆಯನ್ನು, ಆದರೆ ಶೋಧನೆಯ ಸಮಯದಲ್ಲಿ ಆತನಿಗುಂಟಾದ ಬಲಹೀನತೆಯನ್ನು, ಆತನಿಗಗತ್ಯವಾದ ಕರ್ತನ ಸಹಾಯ ಮತ್ತು ***"ನೀನು ವಿಶ್ವಾಸದಲ್ಲಿ ಬಿದ್ದುಹೋಗದಂತೆ ನಾನು ನಿನಗಾಗಿ ಪ್ರಾರ್ಥಿಸಿದ್ದೇನೆ"*** ಎಂಬ ಪ್ರಾರ್ಥನೆಯನ್ನು ನೆನಪಿಸಿಕೊಳ್ಳೋಣ. ಹೀಗೆ ನೆನಪಿಸಿಕೊಳ್ಳುವುದರಿಂದ ನಂತರದಲ್ಲಿ ನಿಸ್ಸಂದೇಹವಾಗಿ ಅಪೋಸ್ತಲನಿಗೆ ನೀಡಿದಂತೆ ನಮಗೂ ವಿಶೇಷವಾದ ನೆರವನ್ನು ನೀಡುತ್ತದೆ. ಈ ರೀತಿಯಲ್ಲಿ ನಾವು ನಮ್ಮ ಎಲ್ಲಾ ಅಗತ್ಯತೆಗಳ ಸಮಯಗಳಲ್ಲಿಯೂ ಕರ್ತನ ಕೃಪೆಯನ್ನು ನಿರೀಕ್ಷಿಸುವಂತೆ ಮಾಡುತ್ತದೆ.

ಅದೇ ಸಮಯದಲ್ಲಿ ನಾವು ಯೂದನನ್ನು ಸಹಾ ನೆನಪುಮಾಡಿಕೊಳ್ಳುವುದು ಲೇಸು. ಆತನ ಪತನವು ಆತನ ಸ್ವಾರ್ಥದ , ಹಂಬಲದ, ಹೇಡಿತನದ ಕಾರಣ ಉಂಟಾಯಿತು. ನಾವು ಇದನ್ನು ನೆನಪುಮಾಡುವಾಗ ಯಾವ ರೀತಿಯಲ್ಲಿ ಈ ಸ್ವಾರ್ಥವೆಂಬ ಬಾಗಿಲಿನ ಮೂಲಕ ಸೈತಾನನು ಹೆಚ್ಚು ಹೆಚ್ಚಾಗಿ ಪ್ರವೇಶಿಸುತ್ತಾನೆ ಎಂಬುದು ನಮಗೆ ತಿಳಿದುಬರುತ್ತದೆ. ಇದರಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಸಹಾಯವಾಗುತ್ತದೆ. ಇಲ್ಲವಾದಲ್ಲಿ ನಾವೂ ಸಹಾ ಅದೇ ರೀತಿಯಲ್ಲಿ ಕೆಡುಕನ ಬಲೆಗೆ ಬೀಳಬೇಕಾಗುತ್ತದೆ. ನಾವು ನಮ್ಮನ್ನು ಸಾಕಿ ಬೆಳಿಸಿದ ಕರ್ತನನ್ನು ಯಾವುದೇ ಕಾರಣಕ್ಕೆ ನಿರಾಕರಿಸದಂತೆ, ಯಾವುದೇ ಅರ್ಥದಲ್ಲಿ ಆತನಿಗೆ ಮತ್ತು ಆತನ ಸಹೋದರರುಗಳಿಗೆ ಮತ್ತು ಆತನ ಸತ್ಯಕ್ಕೆ ದ್ರೋಹವೆಸಗದಂತೆ ಎಚ್ಚರಿಕೆ ವಹಿಸೋಣ. ನಾವು ಮರುದಿನವೂ ನಮ್ಮ ಕರ್ತನ ವಿಮೋಚನಾ ಅನುಭವಗಳನ್ನು ನೆನಪಿಗೆ ತಂದುಕೊಳ್ಳೋಣ. ಈ ರೀತಿಯಲ್ಲಿ ನಾವು ಹೆಚ್ಚು ತೀಕ್ಷ್ಣವಾಗಿ ಆತನ ಅನುಕಂಪಕ್ಕೆ ಪ್ರವೇಶಿಸುವುದು ಮಾತ್ರವಲ್ಲ, ಇದಕ್ಕೂ ಅಧಿಕವಾಗಿ ಆತನ ಅನುಯಾಯಿಗಳಾದ ನಮ್ಮ ಮೇಲೆ ಬರಬಹುದಾದ ಪ್ರಚಂಡವಾದ ಶೋಧನೆಗಳಿಗೆ ನಾವು ಅಪರಿಚಿತರು ಎಂದು ನಾವು ಭಾವಿಸುವುದಿಲ್ಲ. ಆದರೆ ನಾವು ಪರಿಪೂರ್ಣರಾಗಿ ಆತನನ್ನು ಹಿಂಬಾಲಿಸಬಹುದು ಮತ್ತು ಆತನ ಮರಣದ ಸಮಯದಲ್ಲಿನ ಮಾತಾದ ***"ತೀರಿತು"*** ಎಂಬುದನ್ನು ಮತ್ತು

ಇದು ಆತನು ನಮಗಾಗಿ ಮಾಡಿದ ಪಾಪ ನಿವಾರಣಾ ಯಜ್ಞದ ನೆರವೇರಿಕೆಯಾಗಿದೆ ಎಂಬುದನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬಹುದು. ಆತನ ಬಾಸುಂಡೆಗಳ ಮೂಲಕ ನಮಗೆ ಗುಣವಾಯಿತು. ಈ ರೀತಿಯಲ್ಲಿ ಆತನು ನಮಗಾಗಿ ವಿಜ್ಞಾಪನೆಯನ್ನು ಮಾಡಲು ಮತ್ತು ನಮ್ಮ ಎಲ್ಲಾ ಅಗತ್ಯತೆಗಳಲ್ಲಿ ಸಹಾಯ ನೀಡಲು ಸಿದ್ಧನಾಗಿರುತ್ತಾನೆ.

## *ಈಸ್ಟರ್ – ಪಸ್ಕ*

'Easter' ಎಂಬ ಪದವು ಆಂಗ್ಲ ಸತ್ಯವೇದದಲ್ಲಿ (King Jame Version) ಒಂದೇ ಒಂದು ಸಾರಿ(ಅ.ಕೃ.೧೨:೪) ಬರುವುದಾಗಿದ್ದು ಅಲ್ಲಿ ಅದನ್ನು ತಪ್ಪಾಗಿ ಭಾಷಾಂತರ ಗೊಳಿಸಲಾಗಿದೆ, ಅದನ್ನು 'ಪಸ್ಕ ಹಬ್ಬ' ಎಂಬುದಾಗಿ ಅನುವಾದಿಸಬೇಕಾಗಿತ್ತು. 'ಈಸ್ಟರ್' ಎಂಬ ಪದವನ್ನು ಅನ್ಯಜನರಿಂದ ಪಡಕೊಳ್ಳಲಾಗಿದೆ. ಇದು ಸಾಕ್ಸನ್ ಮೂಲದ್ದಾಗಿದ್ದು ಪೌರ್ವಾತ್ಯವಾಗಿದೆ ಮತ್ತು ಸಾಕ್ಸನ್ ಅಥವಾ ಪೌರ್ವಾತ್ಯರ ((Eastern) ದೇವತೆಯ ಹೆಸರಾದ Estera ಳನ್ನು ಸೂಚಿಸುತ್ತದೆ. ಆ ದೇವತೆಯ ಹಬ್ಬವನ್ನು ವರ್ಷದ ವಸಂತ ಋತುವಿನಲ್ಲಿ ಆಚರಿಸಲಾಗುತ್ತಿತ್ತು. ಇದು ಪಸ್ಕಕಾಲವೂ ಆಗಿತ್ತು. ಈ ಹೆಸರನ್ನು ಬಳುವಳಿಯಾಗಿ ಪಡೆದು ಇದನ್ನು ನಮ್ಮ ಕರ್ತನ ಮರಣ, ಪುನರುತ್ಥಾನ ಹಾಗೂ ದಿವಾರೋಹಣದಿಂದ ಪಂಚಾಶತ್ತಮ ದಿನದಂದು ಇಳಿದುಬಂದ ಪವಿತ್ರಾತ್ಮನ ಕಾಲದ ಆಚರಣೆಯವರೆಗೆ ಅನ್ವಯಿಸಿದ್ದು ಸ್ಪಷ್ಟವಾಗಿ ಕ್ರೈಸ್ತ ಆಚಾರಾ ಪದ್ದತಿಗಳನ್ನು ಸುಲಭವಾಗಿ ಅನ್ಯಜನಾಂಗೀಯವನ್ನಾಗಿ ಮಾಡುವ ಒಂದು ಪ್ರಯತ್ನವೇ ಸರಿ. ಈ ರೀತಿಯ ಅನೇಕ ರಿಯಾಯಿತಿಗಳು ಮೂರನೆಯ ಶತಮಾನದಲ್ಲಿಯೇ ಪ್ರಾರಂಭ ಗೊಂಡಿದ್ದವು. ಈ ಪೌರ್ವಾತ್ಯ ಮೂಲದ 'ಈಸ್ಟರ್' ಪದವು ನಮ್ಮಲ್ಲಿ ಯಾವುದೇ ನಿರ್ಧಿಷ್ಟವಾದ ಬದಲಾವಣೆಯನ್ನು ಮಾಡಲಾರದು. ಯಾಕೆಂದರೆ ನಾವು ಎಂದಿಗೂ ಇದನ್ನು ಪೌರ್ವಾತ್ಯ 'Estera' ದೇವತೆಯ ಹಬ್ಬವನ್ನಾಗಿ ಆಚರಿಸುತ್ತಿಲ್ಲ. ಪ್ರೊತಾಸ್ತಾಂತರಲ್ಲಿ ಈ ಹೆಸರು ಹಿಂದಿನ ಕಾಲದಲ್ಲಿದ್ದಂತೆ ಮತ್ತು ಈಗಲೂ ಕಥೋಲಿಕರು ಮಾಡುವಂತೆ ಈ ಸಂಪೂರ್ಣ ಕಾಲಾವಧಿಗೆ ಅನ್ವಯಿಸದೆ ನಿಶ್ಚಯವಾಗಿ ಕೇವಲ ಒಂದು ದಿನಕ್ಕಷ್ಟೇ ಅನ್ವಯಿಸುತ್ತದೆ. ಈ ಒಂದು ದಿನವನ್ನು ಪುನರುತ್ಥಾನದ ಭಾನುವಾರ ((Easter Sunday) ಎಂಬುದಾಗಿ ಕರೆಯುತ್ತಾರೆ. ನಮ್ಮ ಕರ್ತನ ಪುನರುತ್ಥಾನದ ಯಾವುದೇ ಸ್ಮರಣೆಯು ಆತನ ಜನರಿಗೆ ಸದಾ ಅಮೂಲ್ಯವಾಗಿದೆ. ಆದರೆ ಯಾರು ಈ ಸಂಗತಿಗಳನ್ನು ಯುಕ್ತವಾಗಿ ಮೆಚ್ಚಿಕೊಳ್ಳುತ್ತಾರೋ ಅಂತವರು ಮಾತ್ರವೇ ಪ್ರತಿ ಭಾನುವಾರವೂ ಪುನರುತ್ಥಾನ ಭಾನುವಾರವಾಗಿದೆ ಎಂದು ತಿಳಿಯುತ್ತಾರೆ. ಯಾಕೆಂದರೆ, ಆ ದಿನದಲ್ಲಿ ನಾವು ನಮ್ಮ ಕರ್ತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದನು ಎಂಬುದನ್ನು ಸ್ಮರಿಸಿಕೊಳ್ಳುತ್ತೇವೆ.

ನಾವಿಲ್ಲಿ ಈ ಪ್ರಸ್ತಾಪವನ್ನು ಪರಿಚಯಿಸುವ ಆಲೋಚನೆಯು 'ಈಸ್ಟರ್' ಎಂಬ ಪದದ ಬಗ್ಗೆ ಕಥೋಲಿಕರಲ್ಲಿ ಇರುವ ವಿಶಾಲವಾದ ದೃಷ್ಟಿಕೋನದ ಬಗ್ಗೆ ಗಮನ ಸೆಳೆಯುವುದಾಗಿದೆ. ಇದು ಪುನರುತ್ಥಾನ ಭಾನುವಾರ ಮತ್ತು ಶುಭಶುಕ್ರವಾರಗಳನ್ನೂ ಒಳಗೊಂಡಿದ್ದು ಇದನ್ನು ಕೇವಲ ಪಸ್ಕ ಕಾಲದ ಪರ್ಯಾಯ ಪದವನ್ನಾಗಿ

ಉಪಯೋಗಿಸಲ್ಪಡುತ್ತಿದೆ. ಮಾಸ್ ಎಂಬುದರ ಪ್ರಸ್ತಾವನೆ ಮತ್ತು ಆದರ ಬಾರಿ ಬಾರಿಯ ಆಚರಣೆ ಇವುಗಳು ಕರ್ತನ ಮರಣದ ವರ್ಷಾಚರಣೆಯನ್ನು ನಿರರ್ಥಕಗೊಳಿಸುವ ಸಲುವಾಗಿದೆ ಎಂದು ಎಣಿಸಲಾಗುತ್ತಿದೆ ; ಆದರೆ ಹಾಗಿಲ್ಲ. ರಾತ್ರಿ ಭೋಜನವನ್ನು ಸೂಕ್ತ ಸಮಯದಲ್ಲಿ ಆಚರಿಸುವ ಪದ್ದತಿಯು ನಿಂತು ಹೋಗಿ ಅದರ ಸ್ಥಾನವನ್ನು ವಿವಿಧ ರೀತಿಯ ಮಾಸ್ ಸಮರ್ಪಣೆಗಳು ಆಕ್ರಮಿಸಿಕೊಂಡಿದ್ದು ಈ ನಿರ್ಧಿಷ್ಟ ಸ್ಮಾರಕದ ಅರ್ಥವು ಕಳೆದುಹೋಗಿದ್ದಾಗ್ಯೂ ಈ ಕೇಂದ್ರೀಯ ಸತ್ಯತೆಯನ್ನು ಆಚರಿಸುವ ಆದಿ ಸಭೆಯ ಮೂಲ ಪದ್ದತಿಯು ಮತ್ತು ಅದರ ನೈಜ ಪ್ರಸ್ತುತಿಯು ಇನ್ನೂ ಮುಂದುವರಿದಿದೆ.

ಅನೇಕ ಶತಮಾನಗಳವರೆಗೆ ಕ್ರಿಸ್ತನು ಕ್ರೂಜಿತಗೊಂಡ ದಿನವನ್ನು ಯೆಹೂದಿ ಕ್ಯಾಲಂಡರ್ ಅನುಸಾರವಾಗಿ ನಾವೀಗಾಗಲೇ ವಿವರಿಸಿದಂತೆ ಆಚರಿಸಲಾಗುತ್ತಿತ್ತು ; ಆದರೆ ತದನಂತರದಲ್ಲಿ ಯಹೂದಿ ಆಚಾರ ಪದ್ಧತಿಗಳಿಂದ ಕಡಿತಗೊಳ್ಳುವ ಹಂಬಲದಿಂದ ಕ್ರಿಸ್ತನ ಮರಣ ದಿನವನ್ನು ಅಂದರೆ ನಮ್ಮ ಪಸ್ಕವನ್ನು ಲೆಕ್ಕಾಚಾರ ಮಾಡುವ ನೂತನ ವಿಧಾನ ಬಳಕೆಗೆ ಬಂತು. ನೈಸ್ ಎಂಬಲ್ಲಿ ನಡೆದ " The Ecumenical Council' ಇನ್ನು ಮುಂದೆ ಈಸ್ಟರ್ ಹಬ್ಬವನ್ನು ವಸಂತಕಾಲದ ನಂತರ ಬರುವ ಮೊದಲನೆಯ ಹುಣ್ಣಿಮೆಯಂದು ಆಚರಿಸಬೇಕೆಂಬ ಕಟ್ಟಳೆ ಹೊರಡಿಸಿತು. ಇದು ಕರ್ತನ ಮರಣ ದಿನದ ಆಚರಣೆಯನ್ನು 'ಶುಭಶುಕ್ರವಾರ' ಎಂದು ಕರೆಯಲ್ಪಡುವ ಶುಕ್ರವಾರದಂದು ನಿಗಧಿಪಡಿಸಿತಲ್ಲದೆ, ಇನ್ನೂ ಅಧಿಕವಾಗಿ ಈ ಆಚರಣೆಯು ಬಹು ಅಪರೂಪವಾಗಿ ಯೆಹೂದ್ಯರ ಪಸ್ಕ ಆಚರಣೆಯಂತಿರಬೇಕು ಎಂಬುದನ್ನು ಭದ್ರಪಡಿಸಿತು. ದಿನ ಎಣಿಕೆಯ ವತ್ಯಾಸದ ನಂತರ ಯೆಹೂದ್ಯರು ವಸಂತ ಕಾಲದ ವರೆಗೆ ಕಾದು ಅವರ ತಿಂಗಳನ್ನು ಮೊದಲನೆಯ ಅಮವಾಸ್ಯೆಯಂದು ಪ್ರಾರಂಭಿಸಿ ಪಸ್ಕವನ್ನು ಹುಣ್ಣಿಮೆಯಂದು ಅಥವಾ ಹದಿನಾಲ್ಕನೆಯ ದಿನದಂದು ಆಚರಿಸತೊಡಗಿದರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳ ಬೇಕು. ಈ ನೂತನ ಪದ್ದತಿಯ ಪ್ರಕಾರ ಈ ಎರಡೂ ಎಣಿಕಗಳಲ್ಲಿ ಸುಮಾರು ಒಂದು ತಿಂಗಳುಗಳ ವತ್ಯಾಸ ಆಗಾಗ ಕಂಡು ಬರುತ್ತದೆ.

ಯಾವುದು ಉತ್ತಮವಾದ ಪದ್ದತಿಯೆಂದು ಹೇಳುವುದು ನಮ್ಮ ಕೆಲಸವಲ್ಲ. ಆದರೆ ನಮ್ಮ ಆಯ್ಕೆಯು ಕರ್ತನು ಮತ್ತು ಅಪೋಸ್ತಲರು ಅಭ್ಯಾಸಿಸಿದ್ದನ್ನು ಎತ್ತಿ ಹಿಡಿಯುವುದು. ಆದರೆ ಇದು ನಾವು ಎಣಿಕೆಯಲ್ಲಿ ತಪ್ಪಿಹೋಗಿ ಸರಿಯಲ್ಲದ ದಿನಾಂಕ ಇದನ್ನು ಆಚರಿಸಿದರೆ ಯಾವುದೋ ಅಪರಾಧ ಮಾಡಿದ್ದೇವೆಂಬ ಭಾವನೆ ಹುಟ್ಟಿಸುವುದಕ್ಕೆ ಅನುಗುಣವಾದುದಲ್ಲ, ಬದಲಾಗಿ ನಾವು ಆದಷ್ಟು ದೈವಿಕ ಆಚಾರ ಪದ್ದತಿಗಳಿಗೆ ನಿಕಟವಾಗಿ ಇದನ್ನು ಆಚರಿದ್ದೇವೆಂಬ ತೃಪ್ತಿಯನ್ನುಂಟು ಮಾಡಲು. ನಾವು ಇದನ್ನು ಆಧುನಿಕ ಕ್ಯಾಲೆಂಡರ್ ಪ್ರಕಾರ ಅಂದರೆ ೧೫ನೇ ಏಪ್ರಿಲ್ ಅಥವಾ ೧ನೇ ಏಪ್ರಿಲ್ ಅಥವಾ ಲೆಕ್ಕಾಚಾರ ಪ್ರಕಾರದ ಮತ್ತೊಂದು ದಿನಾಂಕಕ್ಕೆ ಬದಲಾಯಿಸಿದರೆ ಒಳ್ಳೆಯದು ಎಂದು ಕೆಲವರು ಮಾಡಬಹುದಾದ ಸಲಹೆಯ ಪ್ರಾಮುಖ್ಯತೆಯು ಅನವಶ್ಯಕ. ಕರ್ತನು ಯೆಹೂದಿ ಕ್ಯಾಲೆಂದರ್ ಪ್ರಕಾರವೇ ಇದನ್ನು ವ್ಯವಸ್ಥೆ ಮಾಡಲು

ಸಕಾರಣವಿದೆ ಮಾತು ಆತನ ಈ ಪದ್ಧತಿಯನ್ನೇ ನಾವು ಅನುಸರಿಸುತ್ತೇವೆ ಎಂಬುದೇ ಇದಕ್ಕೆ ನಾವು ನೀಡುವ ಉತ್ತರವಾಗಿದೆ.

ಒಂದು ನಿರ್ಧಿಷ್ಟವಾದ ಅರ್ಥದಲ್ಲಿ, ಸೂರ್ಯನು ಆತ್ಮೀಕ ರಾಜ್ಯದ ಲಾಂಛನವಾಗಿರುವಾಗ, ಚಂದ್ರನು ಧರ್ಮಶಾಸ್ತ್ರದ ಒಡಂಬಡಿಕೆಯ ಮತ್ತು ಈ ಧರ್ಮಶಾಸ್ತ್ರದ ಒಡಂಬಡಿಕೆಗೆ ಒಳಪಟ್ಟ ಜನರ ಲಾಂಛನವಾಗಿದ್ದಾನೆ. ಆದುದರಿಂದ ಅವರು ನಮ್ಮ ಕರ್ತನನ್ನು ಶಿಲುಬೆಗೆ ಹುಣ್ಣಿಮೆಯ ದಿನದಂದು ಹಾಕಿರುವುದು ವೀಶೇಷವಾದ ರೀತಿಯಲ್ಲಿ ಯುಕ್ತವಾಗಿಯೇ ಇದ್ದು ಈ ಕಾಲವು ದೇವರ ಪೂರ್ವ ನಿಗಧಿತವಾಗಿದೆ. ಆದುದರಿಂದ ಅವರು ಆತನನ್ನು ಈ ಮೊದಲೇ ಶಿಲುಬೆಗೆ ಹಾಕ ಬಯಸಿದರೂ ಅದು ಫಲಪ್ರಧವಾಗಲಿಲ್ಲ. ಯಾಕೆಂದರೆ ***" ಆತನ ಕಾಲವು ಇನ್ನೂ ಬಂದಿರಲಿಲ್ಲ"*** (ಯೊಹಾನ ೦೭:೩೦ ಮತ್ತು ೦೮: ೨೦ ಇವುಗಳನ್ನು ನೋಡಿರಿ). ಆತನನ್ನು ಹುಣ್ಣಿಮೆಯ ದಿನದಂದು ಶಿಲುಬೆಗೆ ಹಾಕಿದ್ದು ಮತ್ತು ಚಂದ್ರನು ಕೂಡಲೇ ಕಾಲಕ್ಷಯವಾಗಲು ಪ್ರಾರಂಭಿಸಿದ್ದು ಅಲ್ಲಿ ಇಸ್ರಾಯೇಲ್ಯರು ತಮ್ಮನ್ನು ದೇವರಿಂದ ತಿರಸ್ಕೃತ ಜನಾಂಗವನ್ನಾಗಿ ಮಾಡಿಕೊಂಡರು ಎಂಬ ಪಾಠವನ್ನು ನಮ್ಮ ಗಮನಕ್ಕೆ ತರುತ್ತದೆ. ಚಂದ್ರನ ಕಾಲಕ್ಷಯವು ಒಂದು ಕಾಲದ ತಗ್ಗುವಿಕೆಯನ್ನೂ ಸೂಚಿಸು ವುದಾಗಿದೆ ಆ ಜನಾಂಗದ ಅವನತಿಯ ಸಂಕೇತವಾಗಿದೆ.

ನಾವಿಲ್ಲಿ ಮೇಲಿನವುಗಳನ್ನು ಸಮರ್ಥಿಸುವಂತೆ ಮಾನ್ಯತೆ ಪಡೆದ ಕೆಲವು ಗ್ರಂಥಕರ್ತರ ಕೆಲವೊಂದು ಯಥೋಚಿತವಾದ ತುಣುಕುಗಳನ್ನು ಉಲ್ಲೇಖಿಸಿತ್ತೇವೆ :–

M.C. CLINTOCK and STRONG'S ENCYCLOPEDIA ದಿಂದ :

*"ಈಸ್ಟರ್" ಅಂದರೆ "ಪಸ್ಕ": 'ಈಸ್ಟರ್' ಎಂಬ ಪದವು Saxon ಮೂಲದ್ದಾಗಿದ್ದು Saxonsರ ದೇವತೆಯನ್ನು ಸೂಚಿಸುತ್ತದೆ. ನಿಜವಾಗಿಯೂ ಇದು ಪೂರ್ವದ (East) Esteria ದೇವತೆಯನ್ನು ಗೌರವಿಸುವುದಾಗಿದೆ. ಸುಮಾರು ಇದೇ ಪಸ್ಕದ ಕಾಲದಲ್ಲಿ (ವಸಂತ ಋತು) ವರ್ಷಂಪ್ರತಿ ಆಕೆಗೆ ಯಜ್ಞಗಳನ್ನು ಸಮರ್ಪಿಸಲಾಗುತ್ತಿತ್ತು. ಈ ಹೆಸರನ್ನು ಪಸ್ಕಕಾಲದಲ್ಲಿ ನಡೆಯುವ ಕ್ರೈಸ್ತರ ಪುನರುತ್ಥಾನ ಹಬ್ಬಕ್ಕೆ ಜೋಡಿಸಲಾಯಿತು. ಆದುದರಿಂದ ನಾವು ಇದನ್ನು* ***'ಈಸ್ಟರ್ ಡೇ'*** *ಅಥವಾ* ***'ಈಸ್ಟರ್ ಸಂಡೇ"*** *ಎಂದು ಬಹಳಷ್ಟು ಅನುಚಿತವಾಗಿ ಕರೆಯುತ್ತೇವೆ. ಯಾಕೆಂದರೆ ಇದು ಯಾವ ರೀತಿಯಲ್ಲಿಯೂ ಪುರಾತನ ಕಾಲದ ಸಾಕ್ಸನ್ ದೇವತೆಯ ಹಬ್ಬಕ್ಕೆ ಸಂಬಂಧಿಸಿದ್ದಲ್ಲ. ಈಗಿನ ಜರ್ಮನ್ ಭಾಷೆಯಲ್ಲಿ 'Ostern' ಎಂಬ ಪದವನ್ನು 'Easter' ಬದಲಿಗೆ ಬಳಿಸಿದೆ. ಇದು ಸಹಾ ಅದೇ ದೇವತೆಯಾದ Esteria ಅಥವಾ 'Ostera'ವನ್ನು ಸೂಚಿಸುತ್ತದೆ, ಕಿಂಗ್ ಜಾಮ್ಸ್ ಆಥರೈಸ್ಡ್ ವರ್ಶನ್ ಸತ್ಯವೇದದಲ್ಲಿ "Intending after Easter to bring him forth to the people" (Acts 12:4) ಎಂಬುದಾಗಿ ಕಂಡುಬರುವ ಈ ಮಾತುಗಳು ಅನುವಾದಕರಲ್ಲಿನ ಏಕರೂಪತೆಯ ಕೊರತೆಯನ್ನು ತೋರಿಸುತ್ತದೆ... . . ಕಡೆಯ ಪರಿಷ್ಕರಣೆಯಲ್ಲಿ ಎಲ್ಲಾ ಪರಿಚ್ಛೇದಗಳಲ್ಲಿ ಇದನ್ನು 'ಪಸ್ಕ' ಎಂದು ಬದಲಿಸಿರುವುದಾದರೂ . . . .*

“ ಏಷ್ಯಾ ಮೈನರ್‌ನಲ್ಲಿನ ಎಲ್ಲಾ ಕ್ರೈಸ್ತ ಸಭೆಗಳು ನಿಸಾನ್ ತಿಂಗಳ ೧೪ನೇ ತಾರೀಖಿಗೆ ಸರಿಬೀಳುವ ದಿನದಲ್ಲಿ ಕರ್ತನ ಮರಣದ ದಿನವನ್ನು ಆಚರಿಸಿದರು. ಸಮಗ್ರ ಪುರಾತನ ಸಭೆಗಳ ಅಭಿಪ್ರಾಯದಲ್ಲಿ ಆ ದಿನದಲ್ಲಿ ಯೇಸುವನ್ನು ಶಿಲುಬೆಗೆ ಹಾಕಲಾಯಿತು. ಮತ್ತೊಂದೆಡೆ ಪಾಶ್ಚಾತ್ಯ ಸಭೆಗಳು (ರೋಮ್) ಪ್ರತಿವರ್ಷವೂ ಕ್ರೂಜೆಗೆ ಹಾಕುವುದನ್ನು ಅದು ನೆರವೇರಿದ ವಾರದ ಒಂದು ನಿರ್ಧಿಷ್ಟ ದಿನದಂದು ಅಂದರೆ ಶುಕ್ರವಾರವೇ ಆದನ್ನು ಆಚರಿಸಬೇಕೆಂಬ ಅಭಿಪ್ರಾಯ ಪಟ್ಟಿತು . . . . ಪಾಶ್ಚಾತ್ಯ ಸಭೆಗಳು ಕ್ರಿಸ್ತನ ಮರಣ ದಿನವನ್ನು ಶೋಕದ ದಿನವೆಂಬ ದೃಷ್ಟಿಕೋನ ಹೊಂದಿದ್ದು ಕ್ರಿಸ್ತನ ಪುನರುತ್ಥಾನ ದಿನದವರೆಗೆ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸುತ್ತಿರಲಿಲ್ಲ. ಏಷ್ಯಾ ಮೈನರ್‌ನ ಸಭೆಗಳು ಕ್ರಿಸ್ತನ ಮರಣವು ಸಂಪೂರ್ಣವಾಗಿ ಒಂದು ವಿಮೋಚನಾ ಕಾರ್ಯವೆಂದು ಪರಿಗಣಿಸಿ ತಮ್ಮ ಉಪವಾಸವನ್ನು ಕ್ರಿಸ್ತನು ಮರಣಹೊಂದಿದ ಸಮಯ ಅಂದರೆ ಶುಭಶುಕ್ರವಾರದ ಮಧ್ಯಹ್ನ ಮೂರು ಘಂಟೆಗೆ ಮುಕ್ತಾಯಗೊಳಿಸುತ್ತಿದ್ದರು. ಇದರ ಬಳಿಕ ಕೂಡಲೇ Agape ಮತ್ತು ಕರ್ತನ ಭೋಜನವನ್ನು ಆಚರಿಸುತ್ತಿದ್ದರು. ಎರಡೂ ಗುಂಪಿನವರು (ಆರ್ಥೋಡಕ್ಸ್ ಈಸ್ಟ್ರನ್ ಮತ್ತು ವೆಸ್ಟ್ರನ್ ಸಭೆಗಳು) ಪಸ್ಕ (pass over) ಎಂಬ ಶಬ್ಧಕ್ಕೇ ಅಂಟಿಕೊಂಡಿದ್ದವು. ಇದರಿಂದ ಅವರು ಈ ವಾರದ ಕೆಲವೊಂದು ವಿಶೇಷ ದಿನಗಳನ್ನು ಮಾನ್ಯಮಾಡಿಕೊಂದು ಇಲ್ಲವೇ ಪೂರ್ತಿ ವಾರವನ್ನೇ ಪಸ್ಕದ ಸ್ಮರಣೆಯಲ್ಲಿ ಅವುಗಳನ್ನು ಆಚರಿಸುತಿದ್ದರು.

“ ಹಳೆಯ ಸಭೆಯ ಈ ಎರಡೂ ಗುಂಪಿನವರ ಮಧ್ಯೆ ಸುಮಾರು ಕ್ರಿ.ಶ. ೧೯೬ರಲ್ಲಿ ಒಡಕುಂಟಾಯಿತು. ರೋಮ್‌ನ ಬಿಷೋಪರಾಗಿದ್ದ ವಿಕ್ಟರ್ ಎಂಬುವವರು ಇತರ ಸಭೆಗಳ ಎಲ್ಲಾ ಬಿಷೋಪರಿಗೆ ಅವರ ವಿವಿಧ ಪ್ರಾಂತಗಳಲ್ಲಿ ಸಿನೋಡನ್ನು ಜರುಗಿಸಿ ನಿಸಾನ್ ತಿಂಗಳ ೧೪ ಮತ್ತು ೧೬ನೇ ದಿನಗಳ ಬದಲಾಗಿ ಆಚರಣೆಯನ್ನು ಶುಕ್ರವಾರ ಮತ್ತು ಭಾನುವಾರದಂದು ಆಚರಿಸುವ ಪಾಶ್ಚಾತ್ಯ ಪದ್ಧತಿಯನ್ನು ಜಾರಿಗೆ ತರುವಂತೆ ಒಂದು ಸುತ್ತೋಲೆಯೊಂದನ್ನು ಹೊರಡಿಸಿದರು. ಕೆಲವರು ಈ ಕೋರಿಕೆಯನ್ನು ಮಾನ್ಯಮಾಡಿದರು. ಆದರೆ ಎಫಸದ ಬಿಷೋಪ್ ಪೊಲಿಕ್ರೇಟ್ ಎಂಬುವವರು ನಡೆಸಿದ ಸಿನೋಡ್‌ನಲ್ಲಿ ನಿಶ್ಚಯಪೂರ್ವಕವಾಗಿ ಇದನ್ನು ತಿರಸ್ಕರಿಸಿ ಬಿಷೋಪ್ ಪೊಲಿಕ್ರೇಟ್‌ರವರ ಪತ್ರವನ್ನು ಅಂಗೀಕರಿಸಲಾಯಿತು. ಅವರು ಏಷ್ಯಾ ಪದ್ಧತಿಯ ರಕ್ಷಣೆಯಲ್ಲಿ ಈ ಹಿಂದೆ ಎಫೆಸದ ಬಿಷೋಪರಾಗಿದ್ದ ಅಪೋಸ್ತಲರಾದ ಫಿಲಿಪ್ಪ ,ಯೋಹಾನ ಮತ್ತು ಅವರ ಏಳು ಮಂದಿ ಸಂಬಂಧಿಕರ ಅಧಿಕಾರವನ್ನು ಉಲ್ಲೇಖಿಸಿದರು . . . .

“ ಈವರೆಗೆ ಏಷಿಯಾ ಮತ್ತು ಪಾಶ್ಚಿಮಾತ್ಯ (ರೋಮ್) ಸಭೆಗಳಿಗಿದ್ದ ವಾದ ವಿವಾದಗಳು ಎರಡು ಅಂಶಗಳ ಕುರಿತಾಗಿ ಮಾತ್ರವೇ ಇತ್ತು. ಅವುಗಳೆಂದರೆ (೧) ಕ್ರಿಸ್ತನು ಮರಣ ಹೊಂದಿದ ವಾರದ ದಿನವನ್ನು ಸ್ಮರಿಸಬೇಕೋ ಇಲ್ಲವೇ ಆ ತಿಂಗಳ ದಿನವನ್ನು ಸ್ಮರಿಸಬೇಕೋ? (೨) ಆ ದಿನ ಉಪವಾಸವನ್ನು ಮುಕ್ತಾಯಗೊಳಿಸ ಬಹುದೋ? ಈಗ ಮೂರನೇ ಅಂಶವೊಂದರ ಬಗ್ಗೆ ವಾಗ್ವಾದ ಹುಟ್ಟಿಕೊಂಡಿದೆ.

ಅದೇನೆಂದರೆ, ನಿಸಾನ್ ತಿಂಗಳ ಹದಿನಾಲ್ಕನೆಯ ತಾರೀಕು ನಿಜವಾಗಿಯೂ ಬರುವ ಕಾಲ. ಸಭಾ ಪಿತೃಗಳಲ್ಲಿ ಅನೇಕರು ಯೆರೂಸಲೇಮ್ ನಾಶಗೊಳ್ಳುವವರೆಗಿನ ಯೆಹೂದ್ಯರ ಮುಂಚಿನ ಲೆಖ್ಖಾಚಾರಗಳ ಪ್ರಕಾರ ನಿಸಾನ್ ತಿಂಗಳ ೧೪ ಯಾವಾಗಲೂ ವಸಂತ ಋತುವಿನ ನಂತರ ಬರುವುದಾಗಿತ್ತು. ನಂತರ ಬಂದ ಯೆಹೂದ್ಯರ ತಪ್ಪು ಲೇಖ್ಖಾಚಾರದ ಪರಿಣಾಮವಾಗಿ ಕೆಲವೊಮ್ಮೆ ನಿಸಾನ್ ತಿಂಗಳ ೧೪ ವಸಂತ ಋತುವಿನ ಮೊದಲೇ ಬೀಳುತಿತ್ತು. ಆದುದರಿಂದ ಎರಡೂ ಗುಂಪಿನವರು ಈಸ್ಟರ್ ಹಬ್ಬವನ್ನು ನಿರ್ಣಯಿಸುವ ನಿಸಾನ್ ತಿಂಗಳ ಹದಿನಾಲ್ಕನೆಯ ತಾರೀಖು ಯಾವಾಗಲೂ ವಸಂತ ಋತುವಿನ ನಂತರವೇ ಬರಬೇಕೆಂದು ಒತ್ತಾಯಪಡಿಸಿದರು . . .

"ಯೆಹೂದ್ಯರ ವರ್ಷಕಾಲವು ಚಂದ್ರಮಾನ ಕಾಲದ್ದಾಗಿದ್ದು, ನಿಸಾನ್ ತಿಂಗಳ ೧೪ನೇ ತಾರೀಖು ಯಾವಾಗಲೂ ಹುಣ್ಣಿಮೆಯಾಗಿರುವುದರಿಂದ, ಮೇಲ್ಕಂಡ ಖಗೋಳ ಶಾಸ್ತ್ರೀಯ ದೃಷ್ಟಿಕೋನವನ್ನು ಆಯ್ದುಕೊಂಡ ಕ್ರೈಸ್ತರು ನಿಸಾನ್ ತಿಂಗಳ ೧೪ನೇ ತಾರೀಖು ವಸಂತ ಋತುವಿನ ಮೊದಲೇ ಬರುವಾಗಲೆಲ್ಲಾ ಕ್ರಿಸ್ತನ ಮರಣ ದಿನವನ್ನು ಯೆಹೂದಿ ಪಸ್ಕಕ್ಕಿಂತ ಒಂದು ತಿಂಗಳು ತಡವಾಗಿ ಆಚರಿಸುತ್ತಾರೆ. . ಈಗ ಕ್ರೈಸ್ತರು ಯೆಹೂದಿ ಕ್ಯಾಲಂಡರ್ ಮೇಲೆ ಆತುಕೊಳ್ಳದೇ ಇರುವುದರಿಂದ ಅವರು ಈಸ್ಟರ್‌ಗಾಗಿ ತಮ್ಮ ಸ್ವಂತ ಲೆಖ್ಖಾಚಾರಗಳನ್ನು ಮಾಡಿಕೊಳ್ಳಬೇಕಾಗಿದೆ. ಈ ಲೆಖ್ಖಾಚಾರಗಳಲ್ಲಿ ಕೆಲವೊಮ್ಮೆ ವತ್ಯಾಸಗಳು ಆಗುವುದುಂಟು. ಭಾಗಶಃ ಈಗಾಗಲೇ ನಿಶ್ಚಯಿಸಲ್ಪಟ್ಟ ಕಾರಣಗಳಿಗಾಗಿ, ಮತ್ತು ಭಾಗಶಃ ವಸಂತ ಋತುವಿನ ಆರಂಭವನ್ನು ಕೆಲವರು ಮಾರ್ಚ್ ತಿಂಗಳ ೧೮, ಮತ್ತೆ ಕೆಲವರು ೧೯, ಇನ್ನೂ ಕೆಲವರು ೨೧ ಎಂದು ನಿಗಧಿ ಪಡಿಸಿರುವುದರಿಂದ. ಕ್ರಿ. ಶ. ೩೧೪ರಲ್ಲಿ Arles ಎಂಬಲ್ಲಿ ನಡೆದ ಸಮ್ಮೇಳನದಲ್ಲಿ ಒಂದು ಏಕರೂಪತೆಯನ್ನು ತರುವ ಪ್ರಯತ್ನ ನಡೆಯಿತು. ಆದರೆ ಅದರ ನಿರ್ಣಯಗಳಿಂದ ಯಾವ ಹೆಚ್ಚಿನ ಪರಿಣಾಮವೂ ಉಂಟಾಗಲಿಲ್ಲ. ಆದುದರಿಂದ ಈ ಪ್ರಸ್ತಾಪವನ್ನು ಮತ್ತೊಮ್ಮೆ ನೈಸ್‌ನಲ್ಲಿ ನಡೆದ ಸಾರ್ವತ್ರಿಕ ಕ್ರೈಸ್ತ ಮಹಾ ಸಮ್ಮೇಳನದಲ್ಲಿ ಚರ್ಚಿಸಲಾಯಿತು ಮತ್ತು ಈಸ್ಟರ್ ಹಬ್ಬವನ್ನು ವಸಂತ ಋತುವಿನ ನಂತರ, ನಿಸಾನ್ ತಿಂಗಳ ೧೪ನೇ ತಾರೀಖಿನ ತರುವಾಯ ಬರುವ ಶುಕ್ರವಾರದಂದು ಆಚರಿಸಲು ನಿರ್ಣಯಿಸಲಾಯಿತು. ಖಗೋಳ ಶಾಸ್ತ್ರದಲ್ಲಿ ಮುಂದುವರೆದ ಅಲೆಕ್ಸಾಂಡ್ರಿಯಾದ ಸಭೆಯು ಪ್ರತಿವರ್ಷ ರೋಮ್ ಸಭೆಗೆ ಯಾವ ದಿನ ಈಸ್ಟರ್ ಹಬ್ಬವನ್ನು ಆಚರಿಸಬಹುದೆಂಬ ಮಾಹಿತಿಯನ್ನು ಲೆಖ್ಖಾಚಾರ ಮಾಡಿ ನೀಡುವಂತೆಯೂ ಮತ್ತು ಇದನ್ನು ರೋಮ್ ಸಭೆಯು ವಿಶ್ವದ ಎಲ್ಲಾ ಸಭೆಗಳಿಗೂ ಸೂಚಿಸಬೇಕೆಂದು ತೀರ್ಮಾನಿಸಲಾಯಿತು. ಆದರೆ ನೈಸ್ ಮಹಾ ಸಮ್ಮೇಳನದ ಈ ನಿರ್ಣಯದಿಂದಲೂ ಕೆಲವೆಡೆ ವತ್ಯಾಸಗಳನ್ನು ಸ್ಥಗಿತಗೊಳಿಸಲು ಸಾಧ್ಯವಾಗಲಿಲ್ಲ. ಇದರ ಲೆಖ್ಖಾಚಾರಮಾಡಿ ಕ್ರಮೇಣ ಏಕರೂಪತೆಯನ್ನು ತರುವ ಹಕ್ಕನ್ನು Dionysius Exiguss ರವರಿಗೆ ಕಾದಿರಿಸಲಾಯಿತು. ಗ್ರೇಟ್ ಬ್ರಿಟನ್‌ನಂಥಃ ಕೆಲವೊಂದು ದೇಶಗಳು ತಮ್ಮ ಪುರಾತನ ಅಭ್ಯಾಸವನ್ನು ಬಹಳಷ್ಟು ಪ್ರತಿರೋಧದವರೆಗೂ ತ್ಯಜಿಸಲಿಲ್ಲ. Charlemagne ಎಂಬುವವರ ಕಾಲದಲ್ಲಿ ಶುಕ್ರವಾರವನ್ನು ಆಚರಿಸುವ ಮತ್ತು ಯೆಹೂದ್ಯರ ಹುಣ್ಣಿಮೆ ಲೆಕ್ಕಾಚಾರವನ್ನು ಮಾನ್ಯಮಾಡದಿರುವ ಏಕರೂಪ ಪದ್ಧತಿಯು ಜಾರಿಗೆ ಬಂತೆಂದು ಕಾಣುತ್ತದೆ. ನಂತರದಲ್ಲಿ Quarto Decimi ಅಂದರೆ ನಿಜವಾದ ದಿನಾಂಕದಂದು ಅಂದರೆ

*ನಿಸಾನ್ ತಿಂಗಳ ೧೪ನೇ ತಾರೀಖು, ವಸಂತ ಋತುವಿನ ನಂತರ ಬರುವ ಹುಣ್ಣಿಮೆ ದಿನದಂದು ಆಚರಿಸುವ ಪದ್ಧತಿಯ ಯಾವ ಸುಳಿವೂ ಉಳಿಯಲಿಲ್ಲ . . .*

*" ಪೋಪ್ Gregory XIII ಎಂಬುವವರು ಕೈಕೊಂಡ ಕ್ಯಾಲೆಂಡರ್ ಪರಿಷ್ಕರಣೆಯು Dionysian Era ವನ್ನು ಒಟ್ಟಾರೆ ಉಳಿಸಿಕೊಂಡಿತು ; ಆದರೆ ಈಸ್ಟರ್ ಹುಣ್ಣಿಮೆಯನ್ನು ಇನ್ನೂ ಹೆಚ್ಚು ಕರಾರುವಕ್ಕಾಗಿ ನಿರ್ಧರಿಸಿತು ಮತ್ತು ಇನ್ನುಮುಂದೆ ಖಗೋಳ ಸಮಯದಿಂದ ಕಾಲೆಂಡರನ್ನು ಬದಲಾಯಿಸುವುದನ್ನು ತಡೆಗಟ್ಟಲು ಎಲ್ಲಾ ಹಂಚಿಕೆಗಳನ್ನೂ ಮಾಡಲಾಯಿತು, ಈ ಸೂಕ್ಷ್ಮವಾದ ಲೆಖ್ಖಾಚಾರದಿಂದ ಕೆಲವೊಮ್ಮೆ ಕ್ರೈಸ್ತರ ಈಸ್ಟರ್ ಕೆಲವೊಮ್ಮೆ ನೈಸೀಯ ನಿರ್ಣಯಕ್ಕೂ ವ್ಯತಿರಿಕ್ತವಾಗಿ ಯೆಹೂದಿ ಪಸ್ಕದೊಂದಿಗೆ ಹೊಂದಿಕೊಳ್ಳುವುದುಂಟು "*

*ಇದೇ ಅಧಿಕಾರವು 'ಪಸ್ಕ' ಎಂಬ ಪದದ ಬಗ್ಗೆ ಹೇಳುವುದೇನೆಂದರೆ :–*

*'**ಪಸ್ಕ**'ವು ವರ್ಷವನ್ನು ಪ್ರತಿನಿಧಿಸುವ ಹಬ್ಬವಾಗಿದೆ. ಅದ್ವಿತೀಯ ಸ್ಥಾನದಲ್ಲಿರುವ ಇದಕ್ಕೆ ಇಬ್ರಿಯ ಸಭೆಗೆ ಎರಡನೆಯ ಸಂಸ್ಕಾರವಾಗಿದ್ದ ಸುನ್ನತಿಯೊಂದಿಗೆ (ವಿಮೋ ೧೨:೪೪ ನೋಡಿರಿ) ನಿಶ್ಚಯ ಸಂಬಂಧವಿದ್ದಂತೆ ತೋರಿಬರುತ್ತದೆ. ಇದನ್ನು ನಾವು ಯೆಹೋಶುವನು ಗಿಲ್ಗಾಲಿನಲ್ಲಿ ದೇವರ ಒಡಂಬಡಿಕೆಯನ್ನು ಪುನರವಾಲೋಕನ ಮಾಡುತ್ತಿರುವಾಗ ಜನರ ಸುನ್ನತಿಯನ್ನು ನೆರವೇರಿಸಿದ ಕೂಡಲೇ ಪಸ್ಕಹಬ್ಬವನ್ನು ಆಚರಿಸಿದ್ದರಲ್ಲಿ ಕಾಣಬಹುದು. ಆದರೆ ಈ ಎರಡೂ ಸಂಸ್ಕಾರಗಳಿಗಿರುವ ಸಂಬಂಧವು ಅವುಗಳ ಪ್ರತಿಸಂಕೇತಗಳು ನೆರವೇರುವವರೆಗೆ ಪೂರ್ಣಗೊಳ್ಳದು, ಕರ್ತನ ಭೋಜನವು ಆಯ್ದ ಜನರ ಪವಿತ್ರ ಸಂಸ್ಕಾರವಾಗಿ ಇದರ ಸ್ಥಾನವನ್ನು ತೆಗೆದುಕೊಂಡಿತು.*

**@@@@@@@@@@@@@@@@**

**@@@@@@@@@@@@@@**

**@@@@@@@@@@@**

**@@@@@@@@**

**@@@@@**

**@@**

**@**